
ಜನಪದ ಅಭಿಯಾನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ–೫ ಮೇ–೨೦೦೫ ಸಂಚಿಕೆ–೧೦



ಕಾರ್ಮಿಕನ ಸಮಾಧಿಯ ಸುತ್ತ...

ಪ್ರಾರಂಭಗೊಂಡಿದೆ ನೀರಿಗಾಗಿ ಹಾಹಾಕಾರ

ಐ.ಎನ್.ಎ.ರಾಮರಾವ್ ಪರಿಚಯಾತ್ಮಕ ಸ್ಮರಣೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ-೨೦೦೫
ಸಂಪುಟ ೫
ಸಂಚಿಕೆ ೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

(08236)298754

e-mail - janapada@yahoo.com
www.janapada.org

ಅವಕಾಶ

"ನಿನ್ನ ವಯಸ್ಸಿನಲಿ ಗಾಂಧಿ
ಇಂಗ್ಲೆಂಡಿನಲ್ಲಿ ಲಾಯರ್ ಓದುತ್ತಿದ್ದರು;
ನೀನೂ ಇದ್ದೀಯ......."

ಅಪ್ಪ ಗದರಿಸಿದ ಮಗನ ಮೇಲೆ ಕೆಕ್ಕರಿಸುತ್ತಾ,
"ನಿನ್ನ ವಯಸ್ಸಿನಷ್ಟರಲಿ
ಅವರಾಗಲೇ ಮಹಾತ್ಮರಾಗಿದ್ದರು;
ಆದರೆ ನೀನು ......"
ತಣ್ಣಗೆ ನುಡಿದ ಮಗ ಪ್ರಪಾತಕ್ಕೆ ತಳ್ಳಿದಂತೆ.

ಹೌದು; ನಾನು ನಾನೇ
ಒಬ್ಬನ ಬದುಕು ಮತ್ತೊಬ್ಬನ ಪ್ರತಿಕೃತಿಯಲ್ಲ.
ಅನುಕರಣೆ ಮಾತ್ರದಲೇ
ಒಳಗಿನ ಮೊಳಕೆ ಚಿಗುರುವುದಿಲ್ಲ.
ಬೀಜಕ್ಕೆ ಬೇಕು: ಫಲವತ್ತಾದ ನೆಲ
ಬಲಿವವರೆಗೂ ರಕ್ಷಣೆಯ ಛಲ.

ಇಂಥ ಮರುಧರೆಯಲ್ಲಿ
ಹುಡುಕುವುದೆಂತು ತಂಪು ನೆಲವ
ಹಾಗೇನಾದರೂ ಸಿಕ್ಕಿ, ಚಿಗುರು ಕತ್ತೆತ್ತಿದರೆ
ದನ-ಕುರಿಗಳ ಹಾವಳಿ, ನೆಕ್ಕಾವು ಬುಡ ಸಹಿತ
ಆದರೂ ಒಳಗಿನ ಛಲ ಪುಟಿದರೆ
ಬೆಳೆಯಬಹುದು ಒಂದಿಷ್ಟು ಕುರುಚಲಾಗಿ ಮಾತ್ರ

ಸುತ್ತೆಲ್ಲಾ ಹಸನಾಗಿ
ಒಳಗಿನ ಹುಮ್ಮಸ್ಸಿಗೆ ಕುಮ್ಮಕ್ಕಿರದಿದ್ದರೆ
ಎಂಥ ಬೀಜದ ಕನಸೂ ಅರಳುವುದಿಲ್ಲ;
ಭ್ರಾಂತಿಯ ಬಡಬಡಿಕೆಗೆ ಅರ್ಥವಿಲ್ಲ.

-ಟಿ. ಎಂ. ಷಡಕ್ಷರಿ.
(ಅಂಗವಿಕಲ ಕವಿ)

ವಿಚಾರ ದೀಪ್ತಿ

ಪ್ರೌಢಶಾಲಾ ಶಿಕ್ಷಕರ ಸಂಘದವರು ಕನ್ನಡ ಪಠ್ಯಪುಸ್ತಕವಾದ 'ಕನ್ನಡ ಕಸ್ತೂರಿ-೯' ಎನ್ನುವುದರಲ್ಲಿರುವ ಕೈವಾರಯೋಗಿ ನಾರಾಯಣಪ್ಪನವರ 'ಹಣ್ಣು ಬಣ್ಣ' 'ಅಲ್ಲಮನ ವಚನಗಳು' ಮತ್ತು ರಾಮಚಂದ್ರ ಶರ್ಮರ 'ಚೈನಾದ ಒಂದು ಹಳೆಯಕತೆ'ಎನ್ನುವ ಕವಿತೆಗಳ ಅರ್ಥವನ್ನು ವಿವರಿಸಲಿಕ್ಕೆ ನನ್ನನ್ನು ಕರೆಸಿದ್ದರು. ಮೊದಲ ಎರಡು ಪಠ್ಯಗಳಂತೂ ಯಾವ ಉಪಾಧ್ಯಾಯರಿಗೂ ಅರ್ಥವಾಗುವ ಹಾಗಿಲ್ಲ. ಒಂದು ವೇಳೆ ಒಬ್ಬರೊ ಇಬ್ಬರೊ ಆಧ್ಯಾತ್ಮ ಸಾಧಕರಿದ್ದರೆ, ಅವರಿಗಷ್ಟೇ ಅರ್ಥವಾದರೆ ಇಡೀ ವಿದ್ಯಾರ್ಥಿವೃಂದಕ್ಕೆ ಅದರಿಂದ ಪ್ರಯೋಜನವಿಲ್ಲ. ಈ ಮೂರೂ ಕವಿತೆಗಳು ಹೈಸ್ಕೂಲು ವಿದ್ಯಾರ್ಥಿಗಳಿಗೆ ಕಾವ್ಯದ ಬಗ್ಗೆ ದ್ವೇಷವನ್ನು ಹುಟ್ಟಿಸಬಹುದೇ ಹೊರತು ಪ್ರೀತಿಯನ್ನಲ್ಲ. ಇಂಥವನ್ನು ಏಕೆ ಪಠ್ಯವನ್ನಾಗಿ ಇಡುತ್ತಾರೆಂದರೆ ಸಮಿತಿಯವರಿಗೆ ಜಾತಿವಾರು, ಜಿಲ್ಲಾವಾರು, ಕೋಮುವಾರು, ಮಂತ್ರಿಗಳ ಶಿಫಾರಸುವಾರು ಕವಿತೆಗಳನ್ನು ಆರಿಸಬೇಕೆಂದು ಇಲಾಖೆಯವರು ಮೊದಲೇ ಸೂಚನೆ ಕೊಟ್ಟಿರುತ್ತಾರೆ. ಕನ್ನಡ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಇದನ್ನು ದಯವಿಟ್ಟು ಇಲಾಖೆಯವರ ಗಮನಕ್ಕೆ ತನ್ನಿ.

–ಸುಮತೀಂದ್ರ ನಾಡಿಗ

ಕಾರ್ಮಿಕನ ಸಮಾಧಿಯ ಸುತ್ತ ....

-ಸುರೇಂದ್ರ ಕೌಲಗಿ

(ರಾಜಕಾರಣಿಗಳು ನಮ್ಮ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿಯ ದಿವಾಳಿತನ ಕುರಿತು ಮಾತನಾಡುತ್ತಾರೆ. ಆದರೆ ಮಾನವನ ಘನತೆಯನ್ನೇ ಪ್ರಶ್ನಿಸಲು ಬರುತ್ತಿರುವ ದೊಡ್ಡ ಅಪಾಯದ ಬಗ್ಗೆ ಆಲೋಚಿಸುವ ತೊಂದರೆ ತೆಗೆದುಕೊಳ್ಳುತ್ತಿಲ್ಲ.)

-ಆರ್.ಎಫ್.ಮಿಲ್ಲರ್

(ಸುಪ್ರಸಿದ್ಧ ಚಿಂತಕ)

ದೇಶಕ್ಕೆ ಸ್ವಾತಂತ್ರ ಬಂದ ಮೇಲೆ ಅತ್ಯಂತ ಹೀನಸ್ಥಿತಿಗೆ ಸಿಕ್ಕಿಕೊಂಡಿರುವ ಪ್ರಜೆ ಯಾರೆಂದರೆ ಕಾರ್ಮಿಕ! ಯಾವನು ಕರ್ಮಿಯೋ ಆತ ಕಾರ್ಮಿಕ. ಈತನ ಸ್ಮರಣೆಗಾಗಿ, ಈತನ ಕರ್ಮಯೋಗದ ಮಹತ್ವವನ್ನು ಗೌರವಿಸುವುದಕ್ಕಾಗಿ, ಈತನಿಗೆ ಸಲ್ಲ ಬೇಕಾಗಿರುವ ನ್ಯಾಯವನ್ನು ಒದಗಿಸುವುದಕ್ಕಾಗಿ ವಿಶ್ವದಾದ್ಯಂತ ಪ್ರತಿವರ್ಷವೂ ಮೇ ಮಾಹೆಯ ಒಂದನೇ ತಾರೀಖನ್ನು "ಕಾರ್ಮಿಕರ ದಿನಾಚರಣೆ"ಯನ್ನಾಗಿ ಆಚರಿಸುವ ಪರಂಪರೆಇದೆ. ಸುಮಾರು ನೂರ ಇಪ್ಪತ್ತೈದು ವರ್ಷಗಳಿಂದಲೂ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಏಕಕಾಲಕ್ಕೆ ರಜೆ ಇರುವ ದಿನವೆಂದರೆ ಅದು ಮೇ ಒಂದನೇ ತಾರೀಖು ಮಾತ್ರ. ಇನ್ನು ಯಾವ ದೊಡ್ಡ ವ್ಯಕ್ತಿಯ ಜನ್ಮದಿನಕ್ಕೂ ಇರದ ಹೆಚ್ಚಿನ ಮಹತ್ವ ಮೇ ಒಂದನೇ ತಾರೀಖಿನ ಕಾರ್ಮಿಕರ ದಿನಾಚರಣೆಗೆ ಇದೆ. ಆದರೆ ಫ್ರಾನ್ಸ್ ದೇಶದಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಸಮಯದಲ್ಲಿ ಯಾವರೀತಿ ಕಾರ್ಮಿಕನ ಶೋಷಣೆ ಆಗುತ್ತಿತ್ತೋ ಅದೇ ರೀತಿಯ ಶೋಷಣೆ ಇಂದಿನ ಕೈಗಾರಿಕಾ ಕ್ರಾಂತಿಯ ಉಚ್ಛ್ರಾಯ ಸ್ಥಿತಿಯಲ್ಲೂ ಆಗುತ್ತಿದೆ. ಶೋಷಣೆಯ ಸ್ವರೂಪ ಬೇರೆಯಾಗಿರಬಹುದು, ಶೋಷಣೆಯ ರೀತಿಗಳು ಬೇರೆಯಾಗಿರಬಹುದು. ಆದರೆ ಶೋಷಣೆಯ ಕೇಂದ್ರ ವ್ಯಕ್ತಿ ಅದೆ ಕಾರ್ಮಿಕನೇ ಆಗಿದ್ದಾನೆ. ಇಲ್ಲಿ ದುಃಖದ ಸಂಗತಿ ಏನೆಂದರೆ ಕಾರ್ಮಿಕರ ಪೋಷಕನ ಸ್ಥಾನದಲ್ಲಿರಬೇಕಾದ ಟ್ರೇಡ್‌ಯೂನಿಯನ್‌ಗಳೇ, ಸರ್ಕಾರಗಳೇ ಕಾರ್ಮಿಕನ ಶೋಷಕರ ಸ್ಥಾನದಲ್ಲಿ ಕುಳಿತುಕೊಂಡಿರುವುದು. ಇವೆರಡು ಸಂಘಟನೆಗಳ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು ಕಾರ್ಮಿಕ ಅಸಮರ್ಥನಾಗಿದ್ದಾನೆ. ಸ್ವಾತಂತ್ರ್ಯ ಬಂದಮೇಲೆ ಕಾರ್ಮಿಕರ ಸಂಖ್ಯೆ ಅಪಾರವಾಗಿ ಬೆಳೆದಿದೆ. ಮೊದಲು ಕಾರ್ಮಿಕನೆಂದರೆ ಯಾವುದಾದರೊಂದು ಕಾರ್ಖಾನೆಯಲ್ಲಿ ಕೆಲಸಮಾಡುವವ ಎಂಬರ್ಥಕ್ಕೆ ಮಾತ್ರ ಸೀಮಿತವಾಗಿತ್ತು ಆದರೆ ದೇಶ ಅಭಿವೃದ್ಧಿಯುಗದಲ್ಲಿ ಮುಂದೆ ನಡೆಯುತ್ತಾ ಹೊದಂತೆ ಕಾರ್ಮಿಕ ವರ್ಗದಲ್ಲಿ ಹತ್ತಾರು ವಿಭೇದಗಳುಂಟಾದವು. ಅವುಗಳಲ್ಲಿ ಪ್ರಧಾನವಾದುದು ಬಿಳಿ ಬಟ್ಟೆಯ

ಕಾರ್ಮಿಕ; ನೀಲಿ ಬಟ್ಟೆಯ ಕಾರ್ಮಿಕ ಅಲ್ಲದೆ, ಕಾರ್ಮಿಕ ವರ್ಗದಲ್ಲಿ ಹತ್ತಾರು ವಲಯಗಳಲ್ಲಿ ಕೆಲಸಮಾಡುವ ಕೆಲಸಗಾರರೂ ಸೇರಿಕೊಂಡರು. ಗಣಿಗಾರಿಕೆ, ಹಡಗು ನಿರ್ಮಾಣ, ಬಂದರುಗಳ ನಿರ್ಮಾಣ, ಕಟ್ಟಡಗಳ ನಿರ್ಮಾಣ, ಅಣೆಕಟ್ಟೆಗಳ ನಿರ್ಮಾಣ, ರಸ್ತೆ-ಸೇತುವೆಗಳ ನಿರ್ಮಾಣ ಮುಂತಾದ ಕ್ಷೇತ್ರಗಳಲ್ಲಿಯ ಜೊತೆಗೆ ಜವಳಿ ಉದ್ಯಮ, ಸಕ್ಕರೆ ಉದ್ಯಮ, ಯಂತ್ರಗಳು ಮತ್ತು ಬಳಕೆವಸ್ತುಗಳ ತಯಾರಿಕಾ ಉದ್ಯಮ ಬೀಡಿತಯಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಕೆಲಸ ಮಾಡುವವರೂ ಸಹ ಕಾರ್ಮಿಕರೆನ್ನಿಸಿಕೊಳ್ಳತೊಡಗಿದರು. ಪಟ್ಟಣ ಹಾಗೂ ನಗರಗಳು ಬೆಳೆದಂತೆ ಇವುಗಳ ಸ್ವಚ್ಛತೆಗಾಗಿ ತೊಡಗಿದ ಪೌರಕಾರ್ಮಿಕರೂ ಸಹ ಕಾರ್ಮಿಕರೆಂಬ ಹಣೆಪಟ್ಟಿ ಪಡೆದರು. ಪಟಾಕಿ ತಯಾರಿಕೆ, ಬೆಂಕಿಪೊಟ್ಟಣ ತಯಾರಿಕೆ, ಗ್ಯಾರೇಜು, ಹೋಟೇಲುಗಳಲ್ಲಿ ಕೆಲಸಮಾಡುವ ಬಾಲ ಕಾರ್ಮಿಕರೂ ಸಹ ಇದರಲ್ಲಿ ಸೇರಿದರು. ಕಾರ್ಮಿಕರ ಈ ವೈವಿಧ್ಯತೆ ಇಲ್ಲಿಗೆ ನಿಲ್ಲಲಿಲ್ಲ. ಕ್ರಮೇಣ ವ್ಯವಸಾಯ ಕ್ಷೇತ್ರದಲ್ಲಿ ಕೆಲಸಮಾಡುವ ಕೃಷಿಕಾರ್ಮಿಕರು, ನೇಕಾರರು, ಕಾರ್ಮಿಕರ ಪಟ್ಟಿಯಲ್ಲಿ ಸೇರಿಕೊಂಡರು. ಕಾರ್ಮಿಕರ ಈ ಪಟ್ಟಿಗೆ ಸೇರದೆ ಹೊರಗೆ ಉಳಿದವರೆಂದರೆ ಸರ್ಕಾರಿ ನೌಕರರು ಮತ್ತು ಇತ್ತೀಚಿಗೆ ಬೆಳೆದಿರುವ ಮಾಹಿತಿ ತಂತ್ರಜ್ಞಾನದಲ್ಲಿ ಕೆಲಸಮಾಡುತ್ತಿರುವ ವಿವಿಧ ಪ್ರಕಾರದ ಇಂಜಿನಿಯರ್‌ಗಳು. ಒಟ್ಟಾರೆ ನೂರಮೂರು ಕೋಟಿ ಪ್ರಜಾಸಂಖ್ಯೆಯ ದೇಶದಲ್ಲಿ ಎಪ್ಪತ್ತು ಕೋಟಿಗೂ ಹೆಚ್ಚು ಜನ ಕಾರ್ಮಿಕರಿದ್ದಾರೆ. ದೇಶನಿರ್ಮಾಣದ ಬೆನ್ನೆಲುಬಾದ ಈ ಕಾರ್ಮಿಕರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತಿ ಬಹು ಶೋಚನೀಯವಾಗಿದೆ. ಅದರಲ್ಲೂ ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿ "ನಾಯಿಪಾಡಾಗಿದೆ". ನಗರಗಳಲ್ಲಿರುವ ಕೊಳಚೆಪ್ರದೇಶಗಳಲ್ಲಿ ಇರುವವರೆಲ್ಲಾ ಒಂದಲ್ಲ ಒಂದು ವಲಯದ ಶೋಷಿತ ಕಾರ್ಮಿಕರೇ ಆಗಿದ್ದಾರೆ. ಇಪ್ಪತ್ತೊಂದನೇ ಶತಮಾನದಲ್ಲಿ ಕಾರ್ಮಿಕನೆಂದರೆ ಯಾರೆಂದು ತಿಳಿಸುವ ನಿಖರ ವ್ಯಾಖ್ಯೆ ನನ್ನ ಕಣ್ಣಿಗೆ ಬಿದ್ದಿಲ್ಲ. ಅಂಥ ವ್ಯಾಖ್ಯೆ ಇದ್ದರೂ ಸಹ ಅದು ಸಾರ್ವತ್ರಿಕವಾಗಿ ಅನ್ವಯಿಸುವ ಹೇಳಿಕೆ ಯಾಗಿರಬಹುದು. ಆದರೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಪ್ರಕಾರದ ಕಾರ್ಮಿಕರಿದ್ದಾರೆ, ಅವರದೇ ಆದ ವಿಶಿಷ್ಟ ಸಮಸ್ಯೆಗಳಿವೆ. ಜಾಗತೀಕರಣದ ಕಾರಣದಿಂದಾಗಿ ಕಾರ್ಮಿಕ ನಿತ್ಯ ಸಂಚಾರಿಯಾಗಿದ್ದಾನೆ. ಜೀವನದ ಭದ್ರತೆ ಹಾಗೂ ಹೆಚ್ಚಿನ ಸಂಪಾದನೆ ಹುಡುಕಿಕೊಂಡು ಹೋಗುವ ಅಲೆಮಾರಿಯಾಗಿದ್ದಾನೆ. ಅವನ ಸರಾಸರಿ ಸಂಪಾದನೆ ದಿನವೊಂದಕ್ಕೆ ಹತ್ತು ರೂಪಾಯಿಯಿಂದ ಪ್ರಾರಂಭವಾಗಿ ನೂರು ರೂಪಾಯಿಗಳವರೆಗೆ ಇದೆ. ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಈ ಪ್ರಮಾಣದ ಕೂಲಿ ಇರುವುದು ಇಂದಿಗೂ ಕಾಣಬರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಕಾರ್ಮಿಕರ ಯೋಗಕ್ಷೇಮಕ್ಕಾಗಿ ಅನೇಕ ಕಾನೂನುಗಳೇನೋ ಇವೆ; ಇಲಾಖೆಗಳೂ ಇವೆ. ಆದರೆ ಎಲ್ಲೆಲ್ಲೂ ಹರಡಿರುವ ಭ್ರಷ್ಟಾಚಾರದ ಕಾರಣದಿಂದಾಗಿ, ಅತ್ಯಂತ

ನಿಧಾನಗತಿಯ ನ್ಯಾಯ ವಿತರಣೆಯಿಂದಾಗಿ, ಪದಾರ್ಥಗಳ ಬೆಲೆಯ ಅನಿಶ್ಚಿತತೆಯಿಂದಾಗಿ ಕಾರ್ಮಿಕರ ಶೋಷಣೆ ಮಾತ್ರ ತಪ್ಪಿಲ್ಲ. ಜಾಗತಿಕರಣ, ಖಾಸಗಿಕರಣ, ಸುಧಾರಿಕರಣ ಮತ್ತು ವಿಶ್ವಬ್ಯಾಂಕ್ ಹಾಗೂ ಅಂತರಾಷ್ಟ್ರೀಯ ನಿಧಿ ವಿಧಿಸುವ ನಿಯಮಾವಳಿಗಳ ಕಾರಣದಿಂದ ಕಾರ್ಮಿಕರು ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ; ಎಷ್ಟೋಸಲ ಬಹಳ ಕಡಿಮೆ ಕೂಲಿ ಅಥವಾ ವೇತನದ ಮೇಲೆ ಕೆಲಸ ಮಾಡುತ್ತಿದ್ದಾರೆ. ಬೇರೆ ಕೆಲಸ ಮಾಡಲು ಅನೇಕ ಕಾರಣಗಳಿಂದ ಅಸಮರ್ಥರಾಗುತ್ತಾರೆ. ಬ್ಯಾಂಕುಗಳು, ಸರ್ಕಾರಿ ಇಲಾಖೆಗಳು ಸಕಾಲಕ್ಕೆ ಸಾಲ ಅಥವಾ ಅನುದಾನ ಅಥವಾ ಸಬ್ಸಿಡಿ ಇತ್ಯಾದಿ ಕೊಡಲು ವಿಫಲವಾಗಿವೆ. ಆದ್ದರಿಂದ ನಿರುದ್ಯೋಗಿ ಕಾರ್ಮಿಕ ಅನಿವಾರ್ಯವಾಗಿ ಖಾಸಗಿ ಲೇವಾದೇವಿಯವರ ಜಾಲಕ್ಕೆ ಸಿಕ್ಕಿ ಹಾಕಿಕೊಳುತ್ತಾನೆ. ಮುಂದೆ ಅವನು ಈ ಜಾಲದಿಂದ ಬಿಡುಗಡೆ ಹೊಂದಲು ಅಸಮರ್ಥನಾಗಿ ಕೊನೆಗೆ ಆತ್ಮಹತ್ಯೆಯ ದಾರಿ ಹಿಡಿಯಬೇಕಾಗುತ್ತದೆ. ಇದುವರೆಗೆ ಸಾರ್ವಜನಿಕ ವಲಯದಲ್ಲಿ ಲಾಭದಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದ ಅನೇಕ ಭಾರೀಕೈಗಾರಿಕೆಗಳು ರಾಷ್ಟ್ರೀಕರಣದ ನಂತರ ನಷ್ಟಕ್ಕೆ ತಿರುಗಿ ಮುಚ್ಚುವ ಸ್ಥಿತಿಯಲ್ಲಿವೆ. ಕೆಲವನ್ನು ಈಗಾಗಲೆ ಸರ್ಕಾರ ಖಾಸಗಿಯವರಿಗೆ ಮಾರುತ್ತಿದೆ. ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಮಾರಲು ಈ ಹಿಂದಿನ ಸರ್ಕಾರ ಓರ್ವ ಮಂತ್ರಿಯನ್ನೇ ಗೊತ್ತುಮಾಡಿತ್ತು. ಸ್ವ-ಇಚ್ಛೆಯ ನಿವೃತ್ತಿ ಯೋಜನೆಯನ್ನು ಜಾರಿಗೆ ತಂದು ಮಧ್ಯವಯಸ್ಸಿನ ಲಕ್ಷಾಂತರ ಕಾರ್ಮಿಕರ ಜೀವನವನ್ನ ಅಭದ್ರಗೊಳಿಸಲಾಗಿದೆ. ಇತ್ತೀಚಿಗಿನ ವರ್ಷಗಳಲ್ಲಿ ಕೃಷಿವಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಕೃಷಿಕಾರ್ಮಿಕರು ಹಾಗೂ ನೇಕಾರರ ಸಂಖ್ಯೆ ಏಳು ಸಾವಿರ. ಆದರೂ ಕೂಡ ಸರ್ಕಾರಗಳ ಯಾವ ಯೋಜನೆಗಳೂ ರೈತರ ಸಮಸ್ಯೆಗಳನ್ನು, ನೇಕಾರರ ಸಮಸ್ಯೆಗಳನ್ನು ಬಗೆಹರಿಸಿಲ್ಲ. ಅಷ್ಟೇ ಅಲ್ಲ ದಿನದಿನಕ್ಕೆ ಅವರ ಜೈವಿಕ ಸ್ಥಿತಿ ಚಿಂತಾಜನಕವಾಗುತ್ತಿದೆ. ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ.

ಇದು ಕೃಷಿ ಹಾಗೂ ಇತರ ಕಾರ್ಮಿಕರ ಸ್ಥಿತಿಯಾದರೆ ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವವರ ಸ್ಥಿತಿಯೂ ಉತ್ತಮವಾಗಿಲ್ಲ. ಅವರ ಸಂಪಾದನೆ ಬಹಳ ಹೆಚ್ಚಾಗಿರಬಹುದು ಆದರೆ ಆ ಬಹುರಾಷ್ಟ್ರೀಯ ಕಂಪನಿಗಳ ಕಾರ್ಮಿಕ ಕುರಿತಾದ ನೀತಿಯೇ ಅತಂತ್ರಾತ್ಮಕವಾಗಿರುತ್ತದೆ.

ಸಾಮಾನ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳಿಂದ ಉದ್ಯೋಗ ಸೃಷ್ಟಿಯಾಗುತ್ತದೆಂಬ ಮಾತು ಕೇಳಿ ಬರುತ್ತದೆ. ಆದರೆ ಆ ಕಂಪನಿಗಳು ತಮ್ಮ ಲಾಭಕ್ಕಾಗಿ ಹಾಗೂ ಹೆಚ್ಚುತ್ತಿರುವ ಸ್ಪರ್ಧೆ ಎದುರಿಸುವುದಕ್ಕಾಗಿ ಕೆಲಸಗಾರರ ಸಂಖ್ಯೆಯನ್ನು ಎಷ್ಟು ಕಡಿಮೆ ಮಾಡಲು ಸಾಧ್ಯವೋ ಅಷ್ಟು ಕಡಿಮೆ ಮಾಡಲು ಪ್ರಯತ್ನಿಸುತ್ತವೆ. ಇದಕ್ಕೆ ಒಂದು ಉದಾಹರಣೆ ಹ್ಯೂಲೆಟ್ ಪ್ಯಾಕರ್ಡ್ (Hp)

ಮತ್ತು ಲ್ಯೂಸೆಂಟ್ ಟೆಕ್ನಾಲಜೀಸ್. ಈ ಎರಡು ಬಹುರಾಷ್ಟ್ರೀಯ ಕಂಪನಿಗಳು ವಿಶ್ವದ ಬೇರೆ ಬೇರೆ ದೇಶಗಳಲ್ಲಿರುವ ತಮ್ಮ ಕಂಪನಿಗಳಲ್ಲಿಯ ಮಾನವ ಸಂಪನ್ಮೂಲವನ್ನು ಹೇಗೆ ಕಡಿಮೆ ಮಾಡುತ್ತಾ ಹೋಗಬಹುದೆಂಬುದರ ಬಗ್ಗೆ ವ್ಯವಸ್ಥಿತವಾಗಿ ಕ್ರಮ ಕೈಗೊಳ್ಳುತ್ತಿವೆ. ಇದುವರೆಗೂ Hp ಕಂಪನಿಯು ವಿಶ್ವದಾದ್ಯಂತ ಸುಮಾರು ೯೦೦೦ ಕೆಲಸಗಾರರನ್ನು ಮನೆಗೆ ಕಳುಹಿಸಿದೆ. ಲ್ಯೂಸೆಂಟ್ ಟೆಕ್ನಾಲಜೀಸ್ ಸಹ ತನ್ನ ಕೆಲಸಗಾರರ ಸಂಖ್ಯೆಯನ್ನು ಕಡಿಮೆ ಮಾಡುತ್ತಿದೆ. ಅಲ್ಲದೆ ಬಹಳಷ್ಟು ಕಂಪನಿಗಳು Hire & Fire ನೀತಿಯನ್ನೇ ಅನುಸರಿಸುತ್ತಿವೆ. ಸೈಸ್ಕೊ ಇಂಡಿಯಾ ಎಂಬ ಕಂಪನಿಯು ತನ್ನ ಕಾರ್ಯ ವ್ಯಾಪ್ತಿಯನ್ನು ಹೆಚ್ಚಿಸುವದಾಗಿ ಹೇಳುತ್ತಲೇ ವಿಶ್ವದಾದ್ಯಂತ ೧೦,೦೦೦ ಕಾರ್ಮಿಕರನ್ನು ಮನೆಗೆ ಕಳುಹಿಸುತ್ತಿದೆ.

ಇನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದರೆ ಇಲ್ಲಿಯ ಕಾರ್ಮಿಕರ ಸ್ಥಿತಿ ಹೃದಯವಿದ್ರಾವಕವಾಗಿದೆ. ಸಣ್ಣ ಕೈಗಾರಿಕೆಗಳಲ್ಲಿ, ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕನ ತಲೆಯ ಮೇಲೆ ಭೀತಿಯಿಂದ ಕೂಡಿದ ಅತಂತ್ರ ಸ್ಥಿತಿಯ ಕತ್ತಿ ಸದಾ ನೇತಾಡುತ್ತಿರುತ್ತದೆ. ಎಸ್.ಎಮ್. ಕೃಷ್ಣನವರ ಮಂತ್ರಿಮಂಡಲದಲ್ಲಿ ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದ ಎಸ್.ಆರ್. ಕಾಶ್ಯಪನವರ ಪ್ರಕಾರ ೨೦೦೧ರಲ್ಲಿ ರಾಜ್ಯದ ಸಣ್ಣ ಕೈಗಾರಿಕೆಗಳಲ್ಲಿ ಶೇಕಡಾ ೮೪ರಷ್ಟು ಕೈಗಾರಿಕೆಗಳು ರೋಗಗ್ರಸ್ಥವಾಗಿದ್ದವು. ಕರ್ನಾಟಕ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಕೊಡುವುದಾಗಿ ಹೇಳಿದ್ದ ಸಬ್ಸಿಡಿಯನ್ನು ಕಳೆದ ವರ್ಷದ ವರೆಗೂ ಬಿಡುಗಡೆ ಮಾಡಿರಲಿಲ್ಲ. ಈ ಸಬ್ಸಿಡಿಯ ಮೊತ್ತ ೪೫೦ಕೋಟಿಗಳಷ್ಟು ಇದೆ. ಇದರಿಂದಾಗಿ ಸುಮಾರು ೮೦ಸಾವಿರ ಸಣ್ಣ ಕೈಗಾರಿಕೆಗಳು ಕಣ್ಣು ಮುಚ್ಚಿವೆ. ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ೮ಲಕ್ಷ ಕಾರ್ಮಿಕರು ನಿರುದ್ಯೋಗಿಗಳಾಗಿ ಬಡತನ, ಸಾಲ, ಹತಾಶೆ ಮುಂತಾದ ಶೂಲಗಳಿಗೆ ಬಲಿಯಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿರುವ ಬಹುತೇಕ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ ಇಲ್ಲವೆ ಮುಚ್ಚಿವೆ. ಸರ್ಕಾರ ಇವುಗಳಿಗೆ ಜೀವ ತುಂಬಲು ಸಾಧ್ಯವಿಲ್ಲದೆ ಒದ್ದಾಡುತ್ತಿವೆ. ಮೈಸೂರಿನಲ್ಲಿದ್ದ ಕೃಷ್ಣರಾಜೇಂದ್ರ ಮಿಲ್ಸ್, ಐಡಿಯಲ್ ಜಾವಾ, ಚಾಮುಂಡಿ ಮಶೀನ್ ಟೂಲ್ಸ್, ಇತ್ಯಾದಿ ಕಾರ್ಖಾನೆಗಳು ಮುಚ್ಚಿಹೋಗಿ ವರ್ಷಗಳೇ ಆದವು. ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಹಾಗೂ ಕುಟುಂಬ ಸದಸ್ಯರ ಗತಿ ಏನಾಯಿತೆಂಬುದು ತಿಳಿದಿಲ್ಲ. ವಿಕ್ರಾಂತ್ ಟೈರ್ ಕಂಪನಿ ಸಹ ಡೋಲಾಯಮಾನ ಸ್ಥಿತಿಯಲ್ಲಿದೆ. ಈ ಕಂಪನಿಯಲ್ಲಿ ಸ್ಥಳೀಯರಿಗೆ ಉದ್ಯೋಗವಕಾಶ ಕಡಿಮೆಯಾಗುತ್ತಿದೆ.

ದೇಶದ ಬಟ್ಟೆ ಉತ್ಪಾದನೆಯಲ್ಲಿ ಶೇಕಡಾ ೨೩ರಷ್ಟು ಭಾಗ ಉತ್ಪಾದಿಸುವ ಕೈಮಗ್ಗ ಕೈಗಾರಿಕೆಯಲ್ಲಿ ೪೦ಲಕ್ಷ ಕೆಲಸಗಾರರು ಪ್ರತ್ಯಕ್ಷವಾಗಿ, ೧ಕೋಟಿ ಕೆಲಸಗಾರರು ಪರೋಕ್ಷವಾಗಿ ಕೆಲಸಮಾಡುತ್ತಿದ್ದಾರೆ. ಆದರೆ ರಾಷ್ಟ್ರತುಂಬಾ ಹಂಚಿಹೋಗಿರುವ ನೇಕಾರರು ಸಂಘಟಿತರಾಗದೇ ಇರುವುದರಿಂದ ಅವರ ಕಷ್ಟದ ಕೂಗು ಸರ್ಕಾರದ

ಕಿವಿಗೆ ತಾಗುತ್ತಿಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೇಂದ್ರಿತವಾಗಿರುವ ಬೀಡಿ ಕೈಗಾರಿಕಾ ಕ್ಷೇತ್ರದಲ್ಲಿ ಇಂಡಿಯನ್ ಟೊಬ್ಯಾಕೊ ಕಂಪನಿಗಳಂಥ ಇನ್ನೂ ಹಲವಾರು ಅತ್ಯಾಧುನಿಕ ಕಂಪನಿಗಳು ಪ್ರವೇಶಿಸಿರುವುದರಿಂದ ಆ ಎರಡು ಜಿಲ್ಲೆಗಳಲ್ಲಿ ೧೮ಲಕ್ಷ ಬೀಡಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ.

ಬಹುದೊಡ್ಡ ಸಂಖ್ಯೆಯಲ್ಲಿ ಗ್ರಾಮೀಣ ಬಡವರಿಗೆ ಉದ್ಯೋಗ ಕೊಟ್ಟಿರುವ ಖಾದಿ ಉದ್ಯಮದ ಸ್ಥಿತಿ ಚಿಂತಾಜನಕವಾಗಿದೆ. ಕರ್ನಾಟಕದ ಎಲ್ಲಾ ದೊಡ್ಡ-ಚಿಕ್ಕ ಖಾದಿ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಿಬೇಟ್ ಎಂಬ ಆಮಿಷದ ಕೊಕ್ಕೆಗೆ ಸಿಕ್ಕಿಹಾಕಿಕೊಂಡು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿವೆ. ಅತ್ಯಂತ ದುರ್ಬಲ ಸಂಘಟನೆಯ ಖಾದಿ ಕ್ಷೇತ್ರದಲ್ಲಿಯ ಕಾರ್ಮಿಕರ ಅಳಲು ಅರಣ್ಯರೋದನವಾಗಿದೆ.

ದೊಡ್ಡ ಕೈಗಾರಿಕೆಗಳೆಲ್ಲವೂ ಬೆಂಗಳೂರು, ದಿಲ್ಲಿ, ಚೆನ್ನೈ, ಕಲ್ಕತ್ತಾ, ಮುಂಬೈಯಂಥಾ ನಗರಗಳಲ್ಲಿಯೇ ಇರುವುದರಿಂದ ಆ ಪಟ್ಟಣಗಳಲ್ಲಿಯ ಜೀವನ ಮಟ್ಟ ಬಡವರಿಗೆ ಮತ್ತು ಮಧ್ಯಮ ವರ್ಗದ ಜನರಿಗೆ ಕೈಗೆಟುಕದಂತಾಗಿರುವುದರಿಂದ ಆ ನಗರಗಳಲ್ಲಿ ಬಡತನ ರೇಖೆಯ ಕೆಳಗಿರುವ ಜನರು ಬದುಕುವುದೇ ದುಸ್ಸಾಧ್ಯವಾಗಿದೆ.

ಆದರೆ ಪ್ರಜಾಪ್ರತಿನಿಧಿಗಳಾದ ಶಾಸಕರು ಹಾಗೂ ಮಂತ್ರಿಗಳು ಶ್ರೀಸಾಮಾನ್ಯನ ಸೇವೆಯ ಹೆಸರಿನಲ್ಲಿ ತಿಂಗಳೊಂದಕ್ಕೆ ೧೨,೦೦೦ ದಿಂದ ೧೬,೦೦೦ ರೂಪಾಯಿಗಳವರೆಗೂ ವೇತನ ಪಡೆಯುತ್ತಿದ್ದಾರೆ. ತಮಿಳುನಾಡಿನ ಕಮ್ಯೂನಿಸ್ಟ್ ಪಕ್ಷದ ವಿಧಾಯಕರು ಮಾತ್ರ ಈ ವೇತನ ತಮಗೆ ಅಗತ್ಯವಿಲ್ಲವೆಂದು ತಿಳಿಸಿದ್ದಾರೆ. ಈ ಲೇಖನವನ್ನು ಬರೆಯುವ ವೇಳೆಗೆ ಭಾರತದ ವಿದೇಶಿ ವಿನಿಮಯದ ಮೊತ್ತಗಳ೧,೪೫೭ ಬಿಲಿಯನ್ ಡಾಲರ್ ಇರುವುದಾಗಿ ತಿಳಿದು ಬಂದಿದೆ. ಆದರೆ ಅದ್ಭುತವಾದ ಈ ಮೊತ್ತ ಯಾರಿಗಾಗಿ, ಎಲ್ಲಿಗೆ ಮತ್ತು ಯಾವಾಗ ಎಂಬ ಪ್ರಶ್ನೆ ಬಡ ಕಾರ್ಮಿಕನನ್ನು ಕಾಡದೆ ಬಿಡದು.

ಇಂದು ಕಣ್ಣಿಗೆ ಕಾಣುತ್ತಿರುವ ಅಭಿವೃದ್ಧಿಯ ಮತ್ತು ತೋರಿಕೆಯ ಆರ್ಥಿಕ ಸುಧಾರಣೆಯ ಕೆಳಪದರದಲ್ಲಿ ಬಡತನದ, ನಿರುದ್ಯೋಗದ, ಹಸಿವೆಯ ಕರಾಳ ಛಾಯೆ ಇದೆ. ಪ್ರತಿವರ್ಷದಂತೆ ಆಚರಿಸಲಾಗುತ್ತಿರುವ ೨೦೦೫ನೇ ಮೇ ೧ರ ಕಾರ್ಮಿಕ ದಿನಾಚರಣೆಯ ದಿನದಂದು ಕಾರ್ಮಿಕನ ಸಮಾಧಿಯಿಂದ ಕೇಳಿಬರುತ್ತಿರುವ ಈ ಎಲ್ಲಾ ಆರ್ತನಾದಕ್ಕೆ ಕಿವಿಗೊಡುವವರು ಯಾರಾದರೂ ಇದ್ದಾರೆಯೆ?

"ತೇಗುತಿರುವವನು ಧನಿಕ, ಕರುಬುತಿರುವವನು ಬಡವ।
ರೇಗುತಿರುವವನು ಬಡವ, ಕೆರಳುವನು ಧನಿಕ॥
ಕೂಗುಗಳು ಧರೆಯೊಳಿಂತನ್ಯೋನ್ಯ ಬೀಜಗಳು।
ರೋಗದುಸಿರುಗಳಂತೆ- ಮರುಳು ಮುನಿಯ॥"

***

ಐ.ಎನ್.ಎ.ರಾಮರಾವ್ ಪರಿಚಯಾತ್ಮಕ ಸ್ಮರಣೆ

-ಎಲ್. ನರಸಿಂಹಯ್ಯ ತೊಂಡೋಟಿ

"ನಾನಳಿವೆ, ನೀನಳಿವೆ
ನಮ್ಮೆಲುಬುಗಳ ಮೇಲೆ
ಮೂಡುವುದು ಮೂಡುವುದು
ನವಭಾರತದ ಲೀಲೆ!"

ಹೀಗೆಂದು ಅನುಭವಿಸುತ್ತಿದ್ದ ಸಂತೋಷ-ಸಂಪತ್ತುಗಳಿಗೆ ಬೆನ್ನುತಿರುಗಿಸಿ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಅರ್ಪಣೆಯಾದವರು ಅಸಂಖ್ಯಾತರು. ಆ ಅಸಂಖ್ಯಾತರಲ್ಲಿ ವಿಶಿಷ್ಟವಾಗಿ ಕಂಡುಬಂದ ಕೆಲವೇ ಮಂದಿಯಲ್ಲಿ ಒಬ್ಬರಾಗಿದ್ದರು ಇತ್ತೀಚಿಗೆ ಕಾಲವಶರಾದ ಐ.ಎನ್.ಎ. ರಾಮರಾವ್.

ರಾಮರಾಯರು ವಿಧಿವಶರಾದುದರಿಂದ ರಾಷ್ಟ್ರಕ್ಕಾಗಿ ಮತ್ತು ಸಮಷ್ಟಿಗಾಗಿ ಬಾಳಿದ ಶ್ರೇಷ್ಠ ಹಾಗೂ ಸಾರ್ಥಕ ಜೀವಿಯನ್ನು ಕಳೆದುಕೊಂಡ ಅತೀವ ಶೋಕ ಕುಟುಂಬ ಮತ್ತು ಬಂಧು ಬಳಗದ್ದಾಗಿದೆ.

ಸುಭಾಷ್ ಬಾಬು ಅವರ 'ಆಜಾದ್‌ಹಿಂದ್ ಫೌಜ್'ನಲ್ಲಿದ್ದು ಮನೋ-ವಾಕ್-ಕಾಯಗಳಲ್ಲಿ ರಾಷ್ಟ್ರೀಯತೆಯನ್ನು ಮೆರೆದು ಜೀವಂತ ಉದಾಹರಣೆಯಾಗಿದ್ದ ಪುತ್ರರತ್ನವೊಂದನ್ನು ಕಳೆದುಕೊಂಡ ಕೊರಗು ಕರ್ನಾಟಕದ್ದಾಗಿದೆ.

ಜೊತೆಗೆ ಸುಮಾರು ಐದೂವರೆ ದಶಕಗಳ ಕಾಲ ಶ್ರದ್ಧೆ-ಶ್ರಮಗಳಿಂದ ತನ್ನನ್ನು ಮುನ್ನಡೆಸಿದ ಮಹಾ ಮಾರ್ಗದರ್ಶಿ ಹಾಗೂ ಪರಮ ಹಿತೈಷಿಯನ್ನು ಕಳೆದುಕೊಂಡ ಪರಿತಾಪ ಭಾರತಸೇವಾದಳದ್ದಾಗಿದೆ.

ಕರ್ನಾಟಕ ರಾಜ್ಯದ ಚಾಮರಾಜನಗರಕ್ಕೆ ಸಮೀಪವಿರುವ 'ಘಟ್ಟವಾಡಿ' ಗ್ರಾಮ ರಾಮರಾಯರ ಹುಟ್ಟೂರು. (ತಮಿಳುನಾಡಿನ ತಾಳವಾಡಿ ಫಿರ್ಕಾಕ್ಕೆ ಸೇರಿದ್ದು) ಕನ್ನಡ ವಾತಾವರಣವಿರುವ ಆ ಗ್ರಾಮದಲ್ಲಿ, ಕನ್ನಡ ಮನೆ ಭಾಷೆಯ ಕುಟುಂಬದಲ್ಲಿ ೧೯೨೨ರಲ್ಲಿ ರಾಮರಾಯರು ಜನಿಸಿದರು. ಅವರ ತಂದೆ ಲಕ್ಷ್ಮೀನಾರಾಯಣಪ್ಪನವರು, ತಾಯಿ ಸೀತಮ್ಮನವರು.

ತಮ್ಮ ಹುಟ್ಟೂರಿಗೆ ಸಮೀಪವಿದ್ದ ಚಾಮರಾಜನಗರದಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ರಾಮರಾಯರು ರಾಷ್ಟ್ರೀಯ ಚಳುವಳಿಯ ಗಾಳಿಗೆ ಸಿಕ್ಕಿದರು. ರಾಷ್ಟ್ರೀಯ ಕಾಂಗ್ರೆಸ್ಸಿಗರಾಗಿದ್ದ ವೀರಕೇಸರಿ ಸೀತಾರಾಮಶಾಸ್ತ್ರಿ, ತಗಡೂರು ರಾಮಚಂದ್ರರಾವ್, ವೀರಣ್ಣಗೌಡ, ರಂಗರಾಮಯ್ಯ, ಎಂ.ಎನ್.ಜೋಯಿಸ್ ಮುಂತಾದವರು ಆಗಿಂದಾಗ ಚಾಮರಾಜನಗರದಲ್ಲಿ ಏರ್ಪಡಿಸುತ್ತಿದ್ದ ಸಭೆಗಳಿಗಾಗಿ ತ್ರಿವರ್ಣ ಧ್ವಜವನ್ನು ಹೊತ್ತು ನಡೆಯುವ, ಹುಂಡಿ ಹಿಡಿದು ಸಾರ್ವಜನಿಕರ ಸಹಾಯವನ್ನು

ಸಂಗ್ರಹಿಸುವ ಚಟುವಟಿಕೆಗಳಲ್ಲಿ ತಮ್ಮನ್ನು ಐಚ್ಛಿಕವಾಗಿ ತೊಡಗಿಸಿಕೊಳ್ಳಲಾರಂಭಿಸಿದರು. ಆಗಿನ ಉಪನ್ಯಾಸಗಳನ್ನು ಕೇಳುತ್ತ ಗಾಂಧೀ–ನೆಹರು–ಸುಭಾಷ್ ಮುಂತಾದವರ ಬಗ್ಗೆ, ಹಾಗೆಯೇ ರಾಷ್ಟ್ರದ ಸ್ಥಿತಿ–ಗತಿಗಳ ಬಗ್ಗೆ ತಿಳಿಯುತ್ತ ತಾಪವನ್ನು ಅನುಭವಿಸ ತೊಡಗಿದರು. ತಮ್ಮ ಮನೆಯವರು ಮತ್ತು ಶಾಲೆಯ ಉಪಾಧ್ಯಾಯ ವರ್ಗ ಬಯ್ದರೂ, ಹೊಡೆದರೂ ಅವರ ಮನಸ್ಸು ಮಾತ್ರ 'ತ್ರಿವರ್ಣ ಧ್ವಜ, ಭಾರತ ಮಾತಾಕಿ ಜಯ್, ವಂದೇ ಮಾತರಂ' ಈ ಅಂಶತ್ರಯಗಳ ಆಕರ್ಷಣೆಯಲ್ಲಿ ಸಿಕ್ಕಿಕೊಂಡಿತು.

೧೯೪೦ರಲ್ಲಿ ರಾಮರಾಯರು ೧೫ ವರ್ಷದವರಾಗಿದ್ದಾಗ ದಸರಾ ನೋಡಲೆಂದು ಮೈಸೂರಿಗೆ ಹೋದರು. ಅಲ್ಲಿ ಆ ದಸರೆಯ ವೈಭವ ಹದಿವಯಸ್ಸಿನ ಅವರ ಕಣ್ಣುಗಳನ್ನು ತುಂಬಿದಂತೆಯೇ, ಆ ಮೆರವಣಿಗೆಯಲ್ಲಿ ಸಾಗಿದ್ದ ಆ ಕಾಲಾಳುಗಳ, ಆ ಕುದುರೆ ಸವಾರರು, ಆ ಸಮವಸ್ತ್ರದ ಪೋಲೀಸರ ಗತ್ತು– ಶಿಸ್ತುಗಳು ಅವರ ಮನಸ್ಸನ್ನು ಸೂರೆಗೊಂಡವು, ಮಾತ್ರವಲ್ಲ ತಾನೂ ಆ ರೀತಿಯ ಗತ್ತು–ಶಿಸ್ತಿನ ಸೈನಿಕನಾಗಬಾರದೇಕೆ ಎಂಬ ಪ್ರಶ್ನೆ, ಹೆಜ್ಜೆ ಹೆಜ್ಜೆಗೂ ಕಾಡತೊಡಗಿತು. ಪರಿಣಾಮವಾಗಿ ಮನೆಯವರಿಗೂ ತಿಳಿಸದೆ ಕಿಶೋರ ವಯಸ್ಸಿನ ರಾಯರು ಅರಮನೆಯ ಕಿಶೋರದಳಕ್ಕೆ ಸೇರಿಬಿಟ್ಟರು. ಆ ಸಂಬಂಧದ ಒಂದು ವರ್ಷದ ತರಬೇತಿಯನ್ನು ಮುಗಿಸುತ್ತಿದ್ದಂತೆ, ಸಿಂಗಪುರದ ರಕ್ಷಣೆಗೆಂದು ನಿಯುಕ್ತವಾಗಿ ಹೊರಟ ಭಾರತೀಯ ಸೇನಾದಳದೊಂದಿಗೆ ಕಿಶೋರದಳವೂ ಸಿಂಗಪುರಕ್ಕೆ ಹೋಗಬೇಕಾಯಿತು–ಹೊರಟಿತು; ರಾಯರೂ ಅದರಲ್ಲಿ ಇದ್ದರು.

ಎರಡನೇ ಮಹಾಯುದ್ಧದಲ್ಲಿ ಸಿಂಗಪುರ ಬ್ರಿಟಿಷರ ಕೈತಪ್ಪಿ ಜಪಾನೀಯರ ವಶವಾದ ಮೇಲೆ, ಅದರ ರಕ್ಷಣೆಗೆಂದೇ ಹೋಗಿದ್ದ ಭಾರತೀಯ ಸೇನೆ ಒಂದು ಬ್ರಿಟಿಷ್ ಭಕ್ತರ ಗುಂಪಾಗಿ, ಇನ್ನೊಂದು ದೇಶ ಭಕ್ತರ ಗುಂಪಾಗಿ ಎರಡು ಹೋಳಾಯಿತು. ಸುಭಾಷ್‌ಬಾಬು ಮತ್ತು ಮೋಹನ್‌ಸಿಂಗ್ ದೇಶಭಕ್ತರ ಗುಂಪಿನ ನೇತಾರರಾಗಿದ್ದರು. ಅವರ 'ಗುಂಪೇ ಆಜಾದ್ ಹಿಂದ್ ಫೌಜ್'ಎಂದಾಯಿತು. ಗುಂಡಿಗೆ ಅಳುಕದ ಸಾವಿಗೆ ಅಂಜದ ಸುಭಾಷ್ ಬಾಬು ಅವರ ಧೀಮಂತಿಕೆ, ದೇಶಭಕ್ತಿ, ಮತ್ತು ಶಿಸ್ತುಗಳಿಂದ ಪ್ರಭಾವಿಸಲ್ಪಟ್ಟಿದ್ದ ಆಜಾದ್ ಹಿಂದ್ ಫೌಜ್ Indian National Army– ತಾಯ್ನಾಡಿನ ರಾಜಕೀಯ ಮುಕ್ತಿಗಾಗಿ ದೇಶದ ಹೊರಗಿದ್ದುಕೊಂಡು ೧೯೪೬ರ ವರೆಗೆ ಸಕ್ರಿಯವಾಗಿ ಹೋರಾಡಿತೆಂಬುದು ಮರೆತು ಹೋಗುತ್ತಿರುವ ರೋಮಾಂಚಕಾರಿ ಇತಿಹಾಸ. ಜಪಾನಿನಲ್ಲಿ ವಿಶೇಷ ಯುದ್ಧತರಬೇತಿ ಪಡೆದಿದ್ದ ನಮ್ಮ ಐ.ಎನ್.ಎ.ರಾಮರಾಯರು ಆ ಪಡೆಯ ಇಂಟೆಲಿಜೆನ್ಸ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದರೆಂಬುದು ಅಭಿಮಾನದ ಸಂಗತಿ.

ಬರ್ಮಾ ವಿಭಾಗದಲ್ಲಿ ಹೋರಾಡುತ್ತಿದ್ದಾಗ, ಶತ್ರುವಿನ ಗುಂಡು ತಾಕಿ ರಕ್ತ ಸಿಕ್ತವಾಗಿ ನೇತಾಡುತ್ತಿದ್ದ ಎಡಗೈ ಹೆಬ್ಬೆರಳನ್ನು 'ತುಯ್ದು ಎಸೆದ' ೨೧ರ ಹರೆಯದ ರಾಯರು 'ಡಿಲ್ಲಿ ಚಲೋ !' ಚಳುವಳಿಯ ನಿಮಿತ್ತ ಬ್ರಿಟಿಷರ ಯುದ್ಧ ಕೈದಿಗಳಾದರು. ಇನ್ನೇನು ಜೀವಾವಧಿ ಶಿಕ್ಷೆಗೋ, ಗಲ್ಲಿಗೋ ಒಳಗಾಗುವ ಸನ್ನಿವೇಶದಲ್ಲಿ ಜನನಾಯಕ

ನೆಹರು ಅವರ ಕ್ರಮದಿಂದ ಬಿಡುಗಡೆಯಾಗಿ ಬದುಕುಳಿದರು. ನಂತರ ಭಾರತಕ್ಕೆ ಹಿಂದಿರುಗಿದರೆಂಬುದೂ, ೧೯೪೭ರಲ್ಲಿ 'ಮೈಸೂರು ಚಲೋ' ಚಳುವಳಿಯಲ್ಲಿ ಪಾಲ್ಗೊಂಡು ಸೆಂಟ್ರಲ್ ಜೈಲ್ ಸೇರಿದಾಗ ಕೆಂಗಲ್ಲು ಹನುಮಂತಯ್ಯನವರ ಸಹ-ಕಾರಾಗೃಹವಾಸಿ ಆಗಿದ್ದರೆಂಬುದೂ ಇತಿಹಾಸದ ಪುಟಗಳಲ್ಲಿ ಉಳಿಯಿತು.

'ಕನಕಪುರದ ಗಾಂಧಿ' ಎನಿಸಿದ್ದ ಶಿಕ್ಷಣ ತಜ್ಞ ಎಸ್.ಕರಿಯಪ್ಪನವರ (ಕೆಂಗಲ್ಲರ ಸಹಪಾಠಿ) ವಿದ್ಯಾಸಂಸ್ಥೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಸೇರಿಕೊಂಡರು. ಸೇವಾದಳದ ಸಂಸ್ಥಾಪಕ ನಾ.ಸು.ಹರ್ಡೀಕರರ ವ್ಯಕ್ತಿತ್ವಕ್ಕೆ ಮಾರುಹೋಗಿ, ಸೇವಾದಳ ಸಂಸ್ಥೆಗೆ ತಮ್ಮನ್ನು ತಾವು ಶ್ರದ್ಧೆಯಿಂದ ಸಮರ್ಪಿಸಿಕೊಂಡು ದುಡಿಯತೊಡಗಿದರು. ಸುಮಾರು ನಾಲ್ಕೂವರೆ ದಶಕಗಳಕಾಲ ಅದರ ಸಂಘಟನೆ, ಸಂವರ್ಧನೆಗಳಿಗಾಗಿ ಶ್ರಮಿಸುತ್ತಾಬಂದ ಐ.ಎನ್.ಎ. ರಾಮರಾಯರು, ೧೯೯೪ರಲ್ಲಿ ಸೇವಾದಳದ ಶಿಬಿರವೊಂದನ್ನು ಮುಗಿಸಿಕೊಂಡು ದಾವಣಗೆರೆಯಿಂದ ಹಿಂದಿರುಗುತ್ತಿದ್ದಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬಲಗಾಲಿಗೆ ಶಾಶ್ವತ ಊನವಾಗಿದ್ದಲ್ಲದೆ, ಆವರ್ತನೋವೂ ಕಾಡುವಂತಾಯಿತು. ಆದರೂ ತತ್ಸಂಬಂಧವಾದ ಕಾರ್ಯ-ಶಿಬಿರಗಳಿಗಾಗಿ ಪಯಣಿಸುವುದನ್ನಾಗಲಿ, ಪಾಲ್ಗೊಳ್ಳುವುದನ್ನಾಗಲಿ ಕೊನೆಯವರೆಗೂ ಅಂದರೆ ಆನಂತರದ ೧೦ವರ್ಷ ಅವರು ಬಿಡಲಿಲ್ಲವೆಂಬುದು ಅವರಿಗಿದ್ದ ನಿಷ್ಠೆ-ಆಸಕ್ತಿಗಳಿಗೆ ಪರಮಸಾಕ್ಷಿ !

೫೨ ವರ್ಷಗಳ ಹಿಂದೆ ೧೯೫೩ರಲ್ಲಿ ಕೊರಟಗೆರೆ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಾಗಿದ್ದ ನಮಗೆ ಅವರ ದರ್ಶನಭಾಗ್ಯ ದೊರಕಿತು. ನಮ್ಮನ್ನು ಉದ್ದೇಶಿಸಿ ಮಾತನಾಡಿದ ಮೇಲೆ, ಎತ್ತರದ ನಿಲುವಿನ, ಖಾದಿ ಪೋಷಾಕಿನ ಅವರು "ಡಿಲ್ಲಿ ಚಲೋ, ಡಿಲ್ಲಿ ಚಲೋ" ಹಾಡನ್ನು ತಮ್ಮ ಗಡಸು ಗಂಭೀರ ಧ್ವನಿಯಲ್ಲಿ ಹಾಡಿ ನಮ್ಮಲ್ಲಿ ಹುಚ್ಚೆಬ್ಬಿಸಿದ್ದು ನೆನಪಿದೆ. ಆಗ ಅವರಿಗೆ ೨೮ ವರ್ಷ.

* ಅದಾದ ೨೯ ವರ್ಷಗಳ ಆನಂತರ, ನಾನು ಮುಖ್ಯೋಪಾಧ್ಯಾಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹಾರೋಹಳ್ಳಿ ಗ್ರಾಮಾಂತರ ಪ್ರೌಢಶಾಲೆಗೆ ದಯಮಾಡಿಸಿದ್ದಾಗ, ನಮ್ಮ ಕೋರಿಕೆಯಂತೆ "ಡಿಲ್ಲಿ ಚಲೋ !" ಹಾಡನ್ನು ಅದೇ ಧ್ವನಿ ಮತ್ತು ಹುಮ್ಮಸ್ಸಿನಿಂದ ಹಾಡಿದರು. ಆಗ ಅವರ ವಯಸ್ಸು ೫೭ವರ್ಷ.

* ಮತ್ತೆ ೧೪ವರ್ಷಗಳಾದ ಮೇಲೆ ಅಂದರೆ ೧೯೯೭ ರಲ್ಲಿ ಕುವೆಂಪು ಸಾಹಿತ್ಯ ವೇದಿಕೆ ಏರ್ಪಡಿಸಿದ್ದ ಸ್ವಾತಂತ್ರ ಸುವರ್ಣಮಹೋತ್ಸವಕ್ಕೆ ಸಹ ಹೋರಾಟಗಾರರಾಗಿದ್ದ ಪೂಜ್ಯರಾದ ಎಸ್. ಕೆ. ಕರೀಮ್‌ಖಾನ್ ಮತ್ತು ಎಚ್.ಎಸ್.ದೊರೆಸ್ವಾಮಿಯವರೊಂದಿಗೆ ದಯಮಾಡಿಸಿದ್ದಾಗಲೂ ಅದೇ ಗತ್ತು, ಅದೇ ಹುಮ್ಮಸ್ಸು! ಆಗ ಅವರ ವಯಸ್ಸು ೭೧ ವರ್ಷ.

* "ಗುರುವರ್ಗ ಮತ್ತು ವಿದ್ಯಾರ್ಥಿ ಸಮುದಾಯದಿಂದ ಮಾತ್ರ ನಮ್ಮ ದೇಶದ ಭವಿಷ್ಯ ರೂಪುಗೊಳ್ಳಬೇಕಾಗಿದೆ, ರೂಪು ಗೊಳ್ಳುತ್ತದೆ ಎಂದು ನಾನು ನಂಬುತ್ತೇನೆ". ಎಂದು ಪದೇ ಪದೇ ಪ್ರತಿಪಾದಿಸುತ್ತಿದ್ದ ರಾಮರಾಯರು' ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ವೇದಿಕೆಗಳಿಗೆ ಹೋಗಲು ಯಾವುದೇ ಸ್ಥಿತಿಯಲ್ಲಿಯೂ ಸಿದ್ಧರಿರುತ್ತಿದ್ದರು.

ರಾಯರ ಚಿಂತನಾರ್ಹ ಅಭಿಪ್ರಾಯಗಳು:

* ತ್ರಿವರ್ಣ ಧ್ವಜ ಕಾಣುತ್ತಿದ್ದಂತೆ, ಭಾರತ್ ಮಾತಾಕಿ ಜೈ, ವಂದೇ ಮಾತರಂ, ಕಿವಿಯ ಮೇಲೆ ಬೀಳುತ್ತಿದ್ದಂತೆ ಉಳಿದೆಲ್ಲವೂ ಮರೆತು ಹೋಗುತ್ತಿದ್ದವು, ಮರೆತು ಹೋಗಬೇಕು–ಅದೇ ದೇಶ ಭಕ್ತಿಯ ಲಕ್ಷಣ.

* ಬ್ರಿಟಿಷರು ಬಿಟ್ಟು ಹೋದ ಸ್ಥಾನ ಮತ್ತು ವ್ಯವಸ್ಥೆಗಳನ್ನು ನಮ್ಮವರು ತುಂಬುತ್ತಾ ಬಂದರು ಅಷ್ಟೆ ನಮ್ಮ ಜಾಯಮಾನದ ಶಿಕ್ಷಣ ತುಂಬಲಿಲ್ಲ. ಗಾಂಧೀಜಿಯವರು ಪ್ರತಿಪಾದಿಸಿದ ಮೂಲ ಶಿಕ್ಷಣವನ್ನು ಜಾರಿಗೊಳಿಸಬೇಕೆಂದು ಡಾ॥ಝುಕೀರ್ ಹುಸೇನ್ ಮುಂತಾದವರು ಎಷ್ಟೇ ಪ್ರಯತ್ನಿಸಿದರೂ, ಪ್ರತಿಕ್ರಿಯೆ ಹಾಗೂ ಪೋಷಕರ ಆಸಕ್ತಿ ನಿರಾಶಾದಾಯಕವಾಗಿತ್ತು.

* ಮಾನವ ಬಲ ಸಂಪನ್ಮೂಲದಿಂದ ನಡೆಯಬೇಕಾದ ನಮ್ಮ ದೇಶದ ಮುಖ್ಯ ಕಸುಬಾದ ವ್ಯವಸಾಯವೂ ಯಾಂತ್ರೀಕೃತವಾಗುತ್ತಿರುವುದು ಒಳ್ಳೆಯ ಲಕ್ಷಣವಲ್ಲ.

* ಗುಂಡು ಸೂಜಿಯನ್ನೂ ತಯಾರು ಮಾಡದಂತಿದ್ದ ದೇಶ ಇಂದು ವೈಜ್ಞಾನಿಕವಾಗಿ ಹಾಗೂ ತಾಂತ್ರಿಕವಾಗಿ ಸಾಕಷ್ಟು ಮುನ್ನಡೆದಿದೆ ಎಂಬುದು ನಿಜ. ಹಾಗೆಯೇ ಮಾನವೀಯ ಸಂಬಂಧ ಮತ್ತು ಮೌಲ್ಯಗಳ ವಿಷಯದಲ್ಲಿ ಹಿನ್ನಡೆದಿದೆ ಎಂಬುದೂ ಅಷ್ಟೇ ನಿಜ.

* ಸುಖೀ ಹಾಗೂ ಸಾಮರಸ್ಯ ಸಮಾಜದ ನಿರ್ಮಾಣಕ್ಕಾಗಿ, ಶೈಕ್ಷಣಿಕ ಅಭಿವೃದ್ಧಿಗಾಗಿ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ತರೆಯುವುದಕ್ಕೆ ಬದಲಾಗಿ ಜಾತೀಯ ವಿದ್ಯಾರ್ಥಿ ನಿಲಯಗಳನ್ನು ಸರಕಾರವೇ ಪ್ರೋತ್ಸಾಹಿಸುತ್ತಿರುವುದು ವಿಷಾದದ ಸಂಗತಿ.

* ಸ್ವತಂತ್ರ ಪೂರ್ವದಲ್ಲಿ ವ್ಯವಸ್ಥೆ ಬಾಡಿಗೆಯದು ಎಂಬಂತಿತ್ತು, ನಾವು ಸ್ವಂತ ಜನವಾಗಿ ದುಡಿಯುತ್ತಿದ್ದೆವು, ಆದರೆ ಈಗ ವ್ಯವಸ್ಥೆ ಸ್ವಂತದ್ದಾಗಿದೆ, ನಾವು ಮಾತ್ರ ಬಾಡಿಗೆಯವರಾಗಿದ್ದೇವೆ.

* ಶೋಷಣೆ ರಹಿತ ಸಮಾಜವು ರೂಪಗೊಳ್ಳಬೇಕೆಂದು ಗಾಂಧೀಜಿ ಆಶಿಸಿದ್ದರು; ಆದರಿಂದು ಶೋಷಿಸಿ ಸಂಪಾದಿಸುವುದರಲ್ಲಿ ಸ್ಪರ್ಧೆ ನಡೆದಿದೆ.

* ಸ್ವಾತಂತ್ರ್ಯೋತ್ತರದಲ್ಲಿ ಬದುಕಿರುವ ನಾವು ಕೆಲವು ವಿಷಯಗಳಲ್ಲಿ ಅನ್ನಲಾಗದೆ, ಅನುಭವಿಸಲೂ ಆಗದೆ ಮೂಕವೇದನೆ ಪಡುವ ಸ್ಥಿತಿಯಲ್ಲಿದ್ದೇವೆ. ಇದಕ್ಕೆ ಗಾಂಧೀ ಯುಗದ ಮುದ್ದು ಮಕ್ಕಳು ಮಾಡಿದ ತಪ್ಪು ಕಾರಣವೆಂದು ತಿಳಿದು ತಾಳಿಕೊಳ್ಳಲೇಬೇಕಾಗಿದೆ.

* ಭಾರತೀಯರಾದ ನಮಗೆ, ಭಾರತೀಯತ್ವವನ್ನು ನೀಡುವುದರಲ್ಲಿ ನಮ್ಮ ವ್ಯವಸ್ಥೆ ಗಮನ ನೀಡಲೇ ಇಲ್ಲ. ಇದು ನನ್ನ ದೇಶ, ನಾನು ಮಾಡುವ ಕೆಲಸ ನನ್ನ ಕೆಲಸ ಎಂಬ ಶ್ರದ್ಧಾನ್ವಿತ ಭಾವನೆಯ ಬಿತ್ತನೆ ಆಗಬೇಕಾಗಿತ್ತು. ಆದರೆ ಅದು ಆಗಲೇ ಇಲ್ಲ.

***

ಪ್ರಾರಂಭಗೊಂಡಿದೆ ನೀರಿಗಾಗಿ ಹಾಹಾಕಾರ

–ಸರೋಜಾ ಪ್ರಕಾಶ

ಕಳೆದ ಮಳೆಗಾಲದಲ್ಲಿ ಬೇರೆಲ್ಲಾ ಕಡೆ ಚನ್ನಾಗಿ ಮಳೆ ಸುರಿದರೂ ಕರ್ನಾಟಕದ ಅನೇಕ ಭಾಗಗಳಲ್ಲಿ ವರುಣರಾಯನ ಕೃಪೆಯಾಗಿಲ್ಲ. ಹಿಂದಿನ ದಶಕಗಳಲ್ಲಿ ಎರಡು ಮೂರು ತಿಂಗಳು ಎಡೆಬಿಡದೆ ಮಳೆ ಸುರಿದ ದಿನಗಳಿದ್ದವು. ಈಚಿನ ವರ್ಷಗಳಲ್ಲಿ ಅಷ್ಟೊಂದು ಮಳೆ ಸುರಿದ ನಿದರ್ಶನಗಳು ತುಂಬಾ ಕಡಿಮೆ. ೧೫–೨೦ದಿನ ಸುರಿದ ನಂತರ ಮಳೆಯ ಆರ್ಭಟ ಕಡಿಮೆಯಾಗುತ್ತಾ ಹೋಗುತ್ತದೆ. ಕ್ಷೀಣಿಸಿದ ಪ್ರತೀ ಮಳೆಗಾಲವೂ ಅದರ ಮುಂದಿನ ಬೇಸಿಗೆಗೆ ನಗರ ಪ್ರದೇಶಗಳಿಗೆ ವಲಸೆ ಬರುವ ಜನರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಮಳೆಯಿಲ್ಲದೆ ಬೆಳೆಯಿಲ್ಲ. ಬೆಳೆಯಿಲ್ಲದೆ ಹೊಟ್ಟೆ– ಬಟ್ಟೆಗಿಲ್ಲ. ಪಟ್ಟಣಗಳಲ್ಲಿ ಕೆಲಸ –ಕೂಲಿಯಿಂದ ಆದರೂ ಹಣ ಗಳಿಸಬಹುದೆಂಬ ಆಸೆ, ಅನೇಕ ಮಧ್ಯಮ ಹಾಗೂ ಕೆಳ ವರ್ಗಗಳ ಕುಟುಂಬಗಳನ್ನು ಪಟ್ಟಣಗಳೆಡೆಗೆ ಸೆಳೆಯುತ್ತದೆ.

ನೀರಿನ ಆಕರಗಳು ಹಿಂದೆ, ಅಂದರೆ ನೂರಿನ್ನೂರು ವರ್ಷಗಳ ಹಿಂದೆ ಎಷ್ಟಿದ್ದವೋ ಅಷ್ಟೇ ಅಥವಾ ಅದಕ್ಕಿಂತ ಕಡಿಮೆಯಿದೆಯೇ ಹೊರತು ಹೆಚ್ಚಾಗಿಲ್ಲ. ನೀರನ್ನು ಬಳಸುವ ಜನರ, ಉದ್ಯಮಗಳ ಸಂಖ್ಯೆ ಮಾತ್ರ ದಿನೇ ದಿನೇ ಏರುತ್ತಿದೆ. ಭೂಮಿಯ ಮೇಲಿನ ಜನಸಂಖ್ಯೆ ಇಂದು ೫೫೦ ಕೋಟಿಗಿಂತ ಹೆಚ್ಚಿದೆ. ಇದರಲ್ಲಿ ೧೦೦ ಕೋಟಿಯಷ್ಟು ಜನರು ಶುದ್ಧ ನೀರಿನ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಇತರ ಸರಕು, ಸಾಮಾನುಗಳನ್ನಾದರೆ ಬೇಡಿಕೆ ಹೆಚ್ಚಾದಂತೆ ತಯಾರಿಕೆ, ಪೂರೈಕೆಗಳನ್ನು ಹೆಚ್ಚಿಸಬಹುದು. ಆದರೆ ನಿಸರ್ಗದ ಕೊಡುಗೆಯಾದ ನೀರನ್ನು ಹುಲುಮಾನವ ಸೃಷ್ಟಿಸಲು ಸಾಧ್ಯವೇ? ಸಮುದ್ರದ ನೀರನ್ನು ಸಿಹಿ ನೀರಾಗಿ ಪರಿವರ್ತಿಸಿ ಕುಡಿಯುವ ನೀರಿನ ಬವಣೆಯನ್ನು ತಗ್ಗಿಸಲು ಪಾಶ್ಚಾತ್ಯ ದೇಶಗಳಲ್ಲಿ ಪ್ರಯತ್ನಗಳು ನಡೆದಿವೆ. ಕೃತಕವಾಗಿ ಮೋಡಗಳನ್ನು ಬಿತ್ತಿ ಮಳೆ ತರಿಸುವ ಸಾಧ್ಯತೆಗಳನ್ನು ನಮ್ಮಲ್ಲಿಯೂ ಪರೀಕ್ಷಿಸಿಯಾಗಿದೆ. ಆದರೆ ಈ ದಿಶೆಗಳಲ್ಲಿ ತಂತ್ರಜ್ಞಾನ ನಿರೀಕ್ಷಿತ ಫಲ ಕೊಡುವಷ್ಟು ಗಟ್ಟಿಯಾಗಿಲ್ಲ. ಈ ತಂತ್ರಜ್ಞಾನಕ್ಕೆಂದು ಅಪಾರ ಹಣ ಸುರಿಯಲು ಬಡ ದೇಶಗಳೂ ಗಟ್ಟಿಯಿಲ್ಲ.

'ಮೂರನೇ ಮಹಾಯುದ್ಧವೇನಾದರೂ ಆದಲ್ಲಿ ನೀರಿನ ಸಲುವಾಗಿ ಆಗಬಹುದು.' 'ನೀರು ೨೧ನೇ ಶತಮಾನದಲ್ಲಿ ಪೆಟ್ರೋಲಿಯಂನಂತಾಗಲಿದೆ.' ಎಂದೆಲ್ಲಾ ಹಲವು ವರ್ಷಗಳ ಹಿಂದೆಯೇ ತಜ್ಞರು ಭವಿಷ್ಯ ನುಡಿದಿದ್ದಾರೆ. ಈ ನುಡಿಗಳು ನಿಜವಾಗುವ ದಿನಗಳು ದೂರವಿಲ್ಲವೆಂಬುದು ಈಗಿನ ಪರಿಸ್ಥಿತಿಯನ್ನು ಗಮನಿಸಿದರೆ ಅರಿವಾಗುತ್ತದೆ. ವಿವಿಧ ದೇಶಗಳಲ್ಲಿ ಹರಿಯುವ, ವಿವಿಧ ರಾಜ್ಯಗಳಲ್ಲಿ ಹರಿಯುವ ನದಿಗಳ ನೀರಿನ ಹಂಚಿಕೆಯ ಕುರಿತು ಭಿನ್ನಾಭಿಪ್ರಾಯಗಳೆದ್ದಿವೆ.

ಬ್ರಹ್ಮಪುತ್ರಾ ನದಿ ಟಿಬೆಟ್, ಬಾಂಗ್ಲಾದೇಶ ಮತ್ತು ಭಾರತ ದೇಶಗಳಲ್ಲಿ ಹರಿಯತ್ತಿದೆ. ಈಗ ಟಿಬೆಟ್ಟಿನಲ್ಲಿ ಹರಿಯುತ್ತಿರುವ ಈ ನದಿಯ ಭಾಗಕ್ಕೆ ಚೀನಾ ಅಣೆಕಟ್ಟು ಕಟ್ಟಲು ಹೊರಟಿದೆ ಎಂಬ ಸುದ್ದಿ ಉಳಿದೆರಡೂ ದೇಶಗಳಿಗೆ ಆತಂಕವನ್ನುಂಟುಮಾಡಿದೆ. ಅಂತಯೇ ತನ್ನ ದೇಶದಲ್ಲಿ ಹರಿಯವ ಗಂಗಾ ನದಿಯ ನೀರಿನ ಪ್ರಮಾಣ ಈ ವರ್ಷದ ಜನೆವರಿಯಲ್ಲಿ ಸಾಕಷ್ಟಾಗಿಲ್ಲವೆಂದು ಬಾಂಗ್ಲಾದೇಶ ಚಿಂತೆಗೊಳಗಾಗಿದೆ. ಕಾವೇರಿ, ಕೃಷ್ಣಾ ನದಿಗಳ ನೀರು ಹಂಚಿಕೆಯ ಕುರಿತು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳ ಜೊತೆ ಭಿನ್ನಾಭಿಪ್ರಾಯ ಹೊಂದಿದ ವಿಷಯವಂತೂ ನಮಗೆಲ್ಲಾ ಗೊತ್ತೇಯಿದೆ. ನೀರಿನ ಅಭಾವವನ್ನು ನೀಗಿಸಲು ಹೊಸ ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಉತ್ತರ ಭಾರತದ ನದಿಗಳನ್ನು ದಕ್ಷಿಣದ ನದಿಗಳೊಡನೆ ಜೋಡಿಸಿ ನೀರಿಲ್ಲದ ಪ್ರದೇಶಗಳಿಗೆ ನೀರುಣಿಸುವ ಬೃಹತ್ ಯೋಜನೆ ಕೇಂದ್ರ ಸರ್ಕಾರದ ಮುಂದಿದೆ. ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿಯಾದ ನೇತ್ರಾವತಿಯ ಒಂದು ಭಾಗವನ್ನು ಕೋಲಾರದ ಒಣ ಭೂಮಿಯಲ್ಲಿ ಹರಿಸುವ ಯೋಜನೆಯನ್ನು ಕರ್ನಾಟಕ ಸರ್ಕಾರ ಪರಿಶೀಲಿಸುತ್ತಿದೆ.

ಅರಣ್ಯನಾಶ ಮಳೆ ನೀರು ಕ್ಷೀಣಿಸಲು ಕಾರಣವಾದರೆ ಕೈಗಾರೀಕರಣದ ಫಲವಾಗಿ ಚಿಕ್ಕ, ದೊಡ್ಡ ಉದ್ಯಮಗಳು ಅಪಾರ ನೀರು ನುಂಗಿ ಕಲುಷಿತ ನೀರನ್ನು ಹೊರ ಹಾಕುತ್ತಿರುವದು, ಇರುವ ನೀರೂ ಅಶುದ್ಧಗೊಳ್ಳಲು ಪ್ರಮುಖ ಕಾರಣವಾಗಿದೆ. ಪೇಟೆ-ಪಟ್ಟಣವಾಸಿಗಳು ದಿನ ನಿತ್ಯ ಉಪಯೋಗಿಸುವ ಸಾಬೂನು, ಡಿಟರ್ಜೆಂಟ್‌ಗಳು, ಕೃಷಿಯಲ್ಲಿ ಅತಿಯಾಗಿ ಬಳಸುವ ರಸಗೊಬ್ಬರ, ಕೀಟನಾಶಕಗಳು ಭೂಮಿಯ ಅಂತರಾಳದ ನೀರಿನಲ್ಲಿ ಅನಪೇಕ್ಷಿತ ಖನಿಜ-ಲೋಹಗಳು, ರಾಸಾಯನಿಕಗಳು ಸೇರುವಂತೆ ಮಾಡಿವೆ. ಈ ಮಾನವ ನಿರ್ಮಿತ ಕಲ್ಮಷಗಳು ಅತಿ ದೊಡ್ಡ ಪ್ರಮಾಣದಲ್ಲಿ ನದಿಗಳನ್ನು ಸೇರುತ್ತಿರುವುದರ ಪರಿಣಾಮ ಇಂದು ಅನೇಕ ನದಿಗಳು ತಮ್ಮ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ. ಏಕತಾನತೆಯ ಪ್ಲಾಂಟೇಷನ್ ಗಿಡಗಳು, ವಾಣಿಜ್ಯ ಬೆಳೆಗಳು ನೀರಿನಲ್ಲಿ ಲವಣಾಂಶವನ್ನು ಹೆಚ್ಚಿಸುತ್ತಿವೆ. ಬಡ ದೇಶಗಳಲ್ಲಿ ಜನಸಂಖ್ಯಾ ಏರಿಕೆ ನೀರಿನ ನಿರ್ವಹಣೆಯಲ್ಲಿ ಅತಿ ದೊಡ್ಡ ತೊಡಕಾಗಿ ಪರಿಣಮಿಸಿದೆ. ಇರುವ ಜಲಮೂಲಗಳು ಮತ್ತು ಅಂತರ್ಜಲದ ಮಟ್ಟ ಕುಸಿಯಲು ಕೊಳವೆ ಬಾವಿಗಳ ನಿರ್ಮಾಣ ನೇರವಾಗಿ ಕಾರಣವಾಗಿದೆ. ಹಳ್ಳಿ, ಪಟ್ಟಣಗಳಲ್ಲಿ ಕುಡಿಯುವ ನೀರಿನ ಸೌಲಭ್ಯವೆಂದು ಕೇಂದ್ರೀಕೃತ ನೀರು ಪೂರೈಕೆಯ ವ್ಯವಸ್ಥೆ ಎಲ್ಲಾ ಕಡೆ ಜಾರಿಯಲ್ಲಿದೆ. ಒಳ್ಳೆಯ ಉದ್ದೇಶದ್ದೇ ಆದರೂ ಈ ವ್ಯವಸ್ಥೆ ನೀರಿನ ಸಮಸ್ಯೆಯನ್ನು ಹೆಚ್ಚಿಸುವಲ್ಲಿ ತನ್ನ ಪಾಲನ್ನೂ ನೀಡಿದೆ. ಕಾರಣ ಹಿಂದೆಲ್ಲಾ ಜನರು ನೀರಿಗಾಗಿ ತಮ್ಮ ಹಿತ್ತಲಿನ ಬಾವಿಯನ್ನು, ಊರೊಟ್ಟಿನ ಕೆರೆಯನ್ನೋ ಅವಲಂಬಿಸುತ್ತಿದ್ದರು. ಆ ಬಾವಿ ಕೆರೆಗಳಲ್ಲಿ ನೀರಿನ ಮರು ಪೂರಣದ ಬಗ್ಗೆ ಸದಾ ಎಚ್ಚರದಿಂದಿರುತ್ತಿದ್ದರು. ನೀರಿನ ಮೂಲಗಳ ಬಗ್ಗೆ

ಪವಿತ್ರ ಭಾವನೆಯನ್ನು ಹೊಂದಿರುತ್ತಿದ್ದರು. ನಗರಸಭೆಯ ನಲ್ಲಿ ನೀರಿನ ಸೌಲಭ್ಯ ದೊರೆತದ್ದೇ ತಡ ಹೆಚ್ಚಿನ ಕೆರೆ ಕಟ್ಟೆಗಳು, ಬಾವಿಗಳು ಅಲಕ್ಷ್ಯಕ್ಕೀಡಾಗಿವೆ. ಕೆರೆಗಳಲ್ಲಿ ಹೂಳು ತುಂಬಿವೆ. ಬಾವಿಗಳು ಪಾಳು ಬಿದ್ದಿವೆ. ಮಂಗಳೂರು ನಗರದಲ್ಲಿ ಇತ್ತೀಚೆಗೆ ಸಮೀಕ್ಷೆಯೊಂದರ ಸಂದರ್ಭದಲ್ಲಿ ಬಾವಿಗಳು ಸಾವಿರದ ಸಂಖ್ಯೆಯಲ್ಲಿದ್ದವೆಂಬ ಮಾಹಿತಿ ದೊರೆತಿದೆ. ಇವುಗಳಲ್ಲೀಗ ಅನೇಕವು ಒಣಗಿವೆ. ಕೆಲವು ಪಾಳು ಬಿದ್ದು ಸೊಳ್ಳೆಗಳ ಆವಾಸಸ್ಥಾನವಾಗಿದೆ. ಹಿಂದೆ ದೇವರ ಕಾಡುಗಳು, ಕೆರೆಗಳು ಕೂಡ ಮಳೆ ಹಾಗೂ ನೀರಿನ ರಕ್ಷಣೆಯನ್ನು ಒದಗಿಸುತ್ತಿದ್ದವು. ಈಗ ದೇವಸ್ಥಾನಗಳು ಮಾತ್ರ ಉಳಿದಿವೆ, ಬೆಳೆಯುತ್ತಿವೆ. ಕೆರೆ ಕಾಡುಗಳಲ್ಲಿ ಹೆಚ್ಚಿನವು ನಿರ್ನಾಮ ಹೊಂದಿವೆ.

ಇನ್ನು ದೊಡ್ಡ ಶಹರಗಳಲ್ಲಿ ಉದ್ಯಮಗಳು, ವಸತಿ ಪ್ರದೇಶಗಳು ಹೆಚ್ಚಿದಂತೆ ಅವಕ್ಕನುಗುಣವಾಗಿ ಕೊಳಗೇರಿಗಳು ಬೆಳೆಯತ್ತಾ ಹೋಗುತ್ತವೆ. ಪ್ರತಿಯೊಬ್ಬರಿಗೂ ಶುದ್ಧ ಸುರಕ್ಷಿತ ನೀರನ್ನು ಒದಗಿಸುವ ಕಾರ್ಯ ದಿನದಿಂದ ದಿನಕ್ಕೆ ಜಟಿಲವಾಗುತ್ತಾ ಹೋಗುತ್ತಿದೆ. ನಗರಗಳ ದಾಹ ಇಂಗಿಸಲು ದೂರದ ಕೆರೆ, ನದಿ, ಅಣೆಕಟ್ಟುಗಳಿಂದ ನೀರನ್ನು ಕೊಳವೆಗಳಲ್ಲಿ ಸಾಗಿಸಿ ಅದನ್ನು ಶುದ್ಧೀಕರಿಸಿ ನಾಗರೀಕರಿಗೆ ಪೂರೈಸಲಾಗುತ್ತದೆ. ಈ ಪ್ರಕ್ರಿಯೆ ಹಲವಾರು ಬಾರಿ ನೀರಾವರಿಗೆ, ಚಿಕ್ಕ ಊರುಗಳಿಗೆ ಒದಗಿಸಬೇಕಾದ ನೀರಿಗೆ ಗೋತಾ ಹಾಕುತ್ತದೆ. ಸರಕಾರ ನಗರಗಳಿಗೆ, ಅಲ್ಲಿಯ ಉದ್ಯಮಿಗಳಿಗೆ ನಾಗರೀಕ ಸೌಲಭ್ಯಗಳನ್ನು ನೀಡುವಲ್ಲಿ ತೋರುವ ಆಸಕ್ತಿಯನ್ನು ಚಿಕ್ಕ ಊರುಗಳಿಗೆ ತೋರಿಸುವುದಿಲ್ಲವೆಂಬ ಆಪಾದನೆ ಯಾವಾಗಲೂ ಇದೆ.

ಶುದ್ಧ ನೀರಿಗಾಗಿ ಜನರು ಹಪಹಪಿಸುವ ದಿನಗಳು ಹತ್ತಿರವಾದ ಹಾಗೆ, ಇರುವ ನೀರನ್ನೇ ವ್ಯಾಪಾರೀ ಸರಕಾಗಿ ಬಳಸಿಕೊಂಡು ಲಾಭ ಗಳಿಸುವ ಹುನ್ನಾರ ನಡೆಸುವ ಅನೇಕ ಕಂಪನಿಗಳು ಹುಟ್ಟಿಕೊಂಡಿವೆ. ಅನೇಕ ಕಡೆ ಸರಕಾರಗಳು ಕೂಡ ನೀರಿನ ಪೂರೈಕೆಯನ್ನು ಖಾಸಗಿ ಕಂಪನಿಗಳಿಗೆ ಒಪ್ಪಿಸಹೊರಟಿವೆ. ನೀರನ್ನು ಅಕ್ಕಿ, ಎಣ್ಣೆ, ಕಾಯಿಗಳಂತೆ ಮಾರಟಕ್ಕಿಟ್ಟರೆ ಏನಾದೀತು? ನೀರಿನ ಮೇಲಿನ ಹಕ್ಕನ್ನು ಜನರು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ. ಇರುವ ನೀರಿನ ಮೇಲೆ ಪ್ರಭುತ್ವ ಹೊಂದುವ ಕಂಪನಿಯು ಹೇಳಿದ ಬೆಲೆಗೆ ಸಾರ್ವಜನಿಕರು ನೀರನ್ನು ಖರೀದಿಸ ಬೇಕಾಗುತ್ತದೆ. ಈಗಾಗಲೇ ಅವನತಿಯ ಹಾದಿಯಲ್ಲಿರುವ ಪರಂಪರಾಗತ ಜಲ ಸಂರಕ್ಷಣಾ ಪದ್ಧತಿಗಳು ಹೇಳ ಹೆಸರಿಲ್ಲದಂತಾಗುತ್ತವೆ. ಈಗಾಗಲೇ ಕುಡಿಯುವ ನೀರನ್ನು ಸೀಸೆಗಳಲ್ಲಿ ತುಂಬಿ ಶುದ್ಧವೆಂದು ಬೊಗಳೆ ಕೊಚ್ಚಿ ಮಾರಾಟಕ್ಕಿಟ್ಟ ಕೆಲವು ಕಂಪನಿಗಳು ದೇಶಾದ್ಯಂತ ಹುಟ್ಟಿಕೊಂಡಿವೆ. ಇದು ಕುಡಿಯುವ ನೀರಿನ ಮಾತಾಯಿತು. ಇನ್ನು ಉಳಿದ ಅವಶ್ಯಕತೆಗಳಿಗೂ ಜನರು ಕಂಪನಿಯ ಮರ್ಜಿಯನ್ನೇ ಕಾಯಬೇಕಾಗುತ್ತದೆ. ನೀರಿನ ಪೂರೈಕೆಯನ್ನು ಖಾಸಗೀ ಕಂಪನಿ ವಹಿಸಿಕೊಂಡಿತೆಂದರೆ ಜಲ ಮೂಲಗಳನ್ನು ಅದು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆ. ಸಾರ್ವಜನಿಕರು ಕಂಪನಿಯ ವ್ಯಾಪ್ತಿಗೆ ಬರುವ ನದಿ, ಬಾವಿ, ಹಳ್ಳ-ಕೊಳ್ಳಗಳ ಮೇಲಿನ ಸಂಪೂರ್ಣ ಅಧಿಕಾರವನ್ನು ಕಳೆದು ಕೊಳ್ಳುತ್ತಾರೆ.

ಜಾಗತೀಕರಣದ ಹೆಸರಿನಲ್ಲಿ ವಿಶ್ವ ಬ್ಯಾಂಕ್, ವಾಣಿಜ್ಯ ಸಂಸ್ಥೆ, ಅಂತಾರಾಷ್ಟ್ರೀಯ ಹಣಕಾಸು ನಿಧಿ ಮುಂತಾದ ಹಣಕಾಸು ಸಂಸ್ಥೆಗಳು ಬಹುರಾಷ್ಟ್ರೀಯ ನೀರಿನ ಕಂಪನಿಗಳಿಗೆ ಕುಮ್ಮಕ್ಕು ನೀಡುತ್ತಿವೆ. ಬಡ ದೇಶಗಳ ಸಾಲ ಮನ್ನ ಮಾಡುವ, ಆರ್ಥಿಕ ನೆರವು ನೀಡುವ ಆಸೆ, ಆಮಿಷಗಳನ್ನು ಒಡ್ಡಿ ವಿದೇಶಿ ಕಂಪನಿಗಳು ಆ ರಾಷ್ಟ್ರಗಳಲ್ಲಿ ಕಾಲಿಡುವಂತೆ ಇವು ಮಾಡುತ್ತಿವೆ. ಈ ತೆರನಾದ ಖಾಸಗೀಕರಣಕ್ಕೆ ವಿರೋಧೀ ಅಲೆ ಕೂಡ ಅಲ್ಲಲ್ಲಿ ಕಾಣಿಸಿಕೊಂಡಿವೆ. ಇತ್ತೀಚೆಗೆ ಆಫ್ರಿಕಾದ ಘಾನಾ ದೇಶದಲ್ಲಿ ನೀರಿನ ಪೂರೈಕೆಯನ್ನು ಖಾಸಗೀ ಕಂಪನಿಯೊದಕ್ಕೆ ಒಪ್ಪಿಸುವ ವಿಷಯದಲ್ಲಿ ಅನೇಕ ವಾದ-ವಿವಾದಗಳೆದ್ದಿವೆ. ನೀರಿನ ಸಮರ್ಪಕ ವಿತರಣಾ ವ್ಯವಸ್ಥೆಯಿಲ್ಲದ ಆ ದೇಶದಲ್ಲಿ ಸರಕಾರ ತನ್ನ ಹೊರೆಯನ್ನು ಕಳಚಿಕೊಳ್ಳಲು ವಿದೇಶಿ ಕಂಪನಿಯೊಂದಕ್ಕೆ ನೀರು ಪೂರೈಕೆಯ ಹಕ್ಕನ್ನು ನೀಡಲು ಮುಂದಾಗಿದೆ. ಖಾಸಗೀ ಕಂಪನಿಯ ಹಿಡಿತದಿಂದ ತಮ್ಮ ನೀರನ್ನುಳಿಸಿಕೊಂಡ ಬೊಲಿವಿಯಾದ ಜಲವೀರರ ಕತೆ ಕೇಳಿ. ಆ ದೇಶದ ಕೋಚಾ ಬಾಂಬಾ ನಗರದಲ್ಲಿ ನೀರಿನ ಸೌಲಭ್ಯಗಳನ್ನು ಒದಗಿಸುತ್ತಿದ್ದ ಸಾರ್ವಜನಿಕ ಕಂಪನಿಗೆ ನೆರವು ನೀಡಲೊಪ್ಪದ ವಿಶ್ವಬ್ಯಾಂಕು ಅಮೇರಿಕಾದ ದೈತ್ಯ ಕಂಪನಿ 'ಬೆಚಲ್'ಗೆ ಬೊಲಿವಿಯಾದ ನೀರು ನಿರ್ವಹಣೆಗೆ ನಲವತ್ತು ವರ್ಷಗಳ ಪರವಾನಗಿ ಕೊಡಿಸಿತ್ತು. ಬೆಚೆಲ್ ಕಂಪನಿ ಬಂದಿದ್ದೇ ಮಾಡಿದ ಮೊದಲ ಕೆಲಸ ನೀರಿನ ದರ ಏರಿಸಿದ್ದು. ನೀರಿನ ದರವನ್ನು ಡಾಲರಿನಲ್ಲಿಟ್ಟಿತು ಕಂಪನಿ. ಮುಂದೆ ಆ ದೇಶದ ಹಣದ ಬೆಲೆ ಕುಸಿದಹಾಗೆ ನೀರಿಗೆ ಜನ ಹೆಚ್ಚೆಚ್ಚು ಹಣ ತೆರುವಂತಾಯಿತು. ಜಲಮೂಲಗಳನ್ನೆಲ್ಲಾ ತನ್ನದೆಂದು ವಾದಿಸಿದ ಕಂಪನಿ ರೈತರು ತಮ್ಮ ಬಾವಿಯಿಂದ ನೀರೆತ್ತುವುದಕ್ಕೂ ಛಾವಣಿಯಿಂದ ಬೀಳುವ ಮಳೆ ನೀರಿನ ಸಂಗ್ರಹಕ್ಕೂ ಆಕ್ಷೇಪವೆತ್ತತೊಡಗಿತು. ನೋಡ ನೋಡುತ್ತಾ ಜಲ ಸಂರಕ್ಷಣೆಗೆ ಬಳಸುತ್ತಿದ್ದ ಅಪೂರ್ವ ವ್ಯವಸ್ಥೆಗಳು ಜನರ ಒಪ್ಪಿಗೆಯಿಲ್ಲದೆ ಕಂಪನಿಗೆ ಸೇರಿದವು. ವಿದೇಶಿ ಕಂಪನಿಗೆ ದೇಶೀಯ ಸಂಪ್ರದಾಯ, ಪದ್ಧತಿಗಳನ್ನು ಉಳಿಸಿ, ಬೆಳೆಸುವ ಬದಲಾಗಿ ಗಳಿಸುವ ಹಣದ ಬಗ್ಗೆಯೇ ಹೆಚ್ಚು ಆಸಕ್ತಿ. ಕೆಲವೇ ದಿನಗಳಲ್ಲಿ ಜನರ ಆಕ್ರೋಶ ಮೇರೆ ಮೀರಿ, ಜನ ದಂಗೆ ಎದ್ದು ಕಂಪನಿ ಕೊಚಬಾಂಬಾ ಊರನ್ನೇ ತ್ಯಜಿಸಬೇಕಾಯಿತು. ನಮ್ಮ ದೇಶದಲ್ಲೂ ಹಲವೆಡೆ ನೀರಿನ ಖಾಸಗೀಕರಣದ ಪ್ರಯತ್ನ ನಡೆದಿದೆ. 'ರೇಡಿಯಾಸ್ ವಾಟರ್ ಲಿಮಿಟೆಡ್' ಕಂಪನಿ ಛತ್ತೀಸ್‌ಘಡದ ಶಿಯೋನಾಥ್ ನದಿ ನೀರಿನ ಒಂದು ಭಾಗವನ್ನು ಮೂವತ್ತು ವರ್ಷಗಳ ಅವಧಿಗೆ ಗುತ್ತಿಗೆಗೆ ಪಡೆದಿದೆ. ಈಗ ಕೈಗಾರಿಕಾ ಕೇಂದ್ರಗಳಿಗೆ ಮತ್ತು ಸರಕಾರಕ್ಕೆ ನೀರನ್ನು ಮಾರಾಟ ಮಾಡುತ್ತಿರುವ ಈ ಕಂಪನಿ ತನ್ನ ವ್ಯಾಪ್ತಿಯಲ್ಲಿ ಬರುವ ನದಿಯ ಭಾಗದಲ್ಲಿ ಬೆಸ್ತರಿಗೆ ಮೀನು ಹಿಡಿಯುವುದನ್ನು, ಜನರಿಗೆ ಸ್ನಾನ ಮಾಡುವುದನ್ನು ನಿಷೇಧಿಸಿದೆ. ತಮಿಳುನಾಡಿನ ತಿರುಪುರದ ಹೆಸರು ಕೇಳಿದ್ದೀರಲ್ಲಾ? ಜವಳಿ ಉದ್ಯಮದಲ್ಲಿ ಕಳೆದ ಐದಾರು ವರ್ಷಗಳಲ್ಲಿ ಅತೀವ ಪ್ರಗತಿ ಸಾಧಿಸಿದ ಈ ಊರಿನಲ್ಲಿ ಒಂದು ಚದುರ ಕಿ.ಮಿ.ನಲ್ಲಿರುವ ಲಕ್ಷಾಧೀಶರ ಸಂಖ್ಯೆ ಭಾರತದಲ್ಲೇ

ಹೆಚ್ಚಿದೆ. ಉದ್ಯಮ ಇಲ್ಲಿ ಬಳಸುವ ನೀರು ಒಂಭತ್ತು ಕೋಟಿ ಲೀಟರಾದರೆ ಅದು ಹೊರ ಬಿಡುವ ರಾಡಿ ನೀರು ಎಂಟೂವರೆ ಕೋಟಿ ಲೀಟರ್!! ಈ ಊರಿನ ನೀರಿನ ನಿರ್ವಹಣೆ ಖಾಸಗಿ ಕಂಪನಿಯೊಂದರ ವಶವಾಗಿದೆ. ಇಲ್ಲಿ ವಾಸಿಸುವ ಬಡ ನೇಕಾರರು, ಕೂಲಿಕಾರರು ಬಕೆಟ್ ನೀರೊಂದಕ್ಕೆ ಮೂರು ರೂಪಾಯಿ ತೆರಬೇಕಾಗಿದೆ.

ನೀರಿನ ಅಭಾವವನ್ನೇ ಬಂಡವಾಳವನ್ನಾಗಿಸಿಕೊಂಡು ಬಡಜನರನ್ನು ದೋಚುವ ಈ ರೀತಿಯ ಖಾಸಗಿಕರಣದಿಂದಾಗಲೀ ಅಥವಾ ನದೀ ಜೋಡಣೆ, ನದಿಯ ನಡೆ ಬದಲಿಸುವಂತಹ ನಿಸರ್ಗ ವಿರೋಧೀ ಪ್ರಯತ್ನಗಳಿಂದಾಗಲೀ ನೀರಿನ ಸಮಸ್ಯೆ ಖಂಡಿತಾ ದೂರವಾಗುವುದಿಲ್ಲ. ಮುಖ್ಯವಾಗಿ ಜಲಮೂಲಗಳ ಸಂರಕ್ಷಣೆಯಾಗಬೇಕು. ಜಲಮಾಲಿನ್ಯವನ್ನು ತಡೆಯುವ ಪ್ರಯತ್ನವಾಗಿ ಬಿಗಿ ಕಾನೂನುಗಳು ಜಾರಿಗೆ ಬರಬೇಕು. ನೀರಿನ ಅತಿ ಬಳಕೆ ನಿಲ್ಲಬೇಕು ಮಳೆರಾಯ ಸುರಿದ ನೀರನ್ನು ಇಂಗಿಸಿಕೊಳ್ಳಲು ಸಾಂಪ್ರದಾಯಿಕ ಪದ್ಧತಿಗಳ ಅನುಕರಣೆ ಆಗಬೇಕು. ಪಟ್ಟಣ ಪ್ರದೇಶಗಳಲ್ಲಿ ಕಟ್ಟುವ ಪ್ರತಿಯೊಂದು ಹೊಸ ಕಟ್ಟಡಕ್ಕೂ ಛಾವಣಿ ನೀರು ಸಂಗ್ರಹಣೆಯನ್ನು ಕಡ್ಡಾಯಗೊಳಿಸಬೇಕು.

ಕತ್ತಲಲ್ಲಿ ಮಿಂಚು ಕೋರೈಸಿದಂತೆ ತಡವಾಗಿಯಾದರೂ ಅಲ್ಲಲ್ಲಿ 'ಜಲಜಾಗೃತಿ' ನಮ್ಮ ಜನರಲ್ಲಿ ಮೂಡುತ್ತಿದೆ. ಜಲ ಮರುಪೂರಣ, ಮಳೆಕೊಯ್ಲು, ಛಾವಣಿ ನೀರು ಸಂಗ್ರಹಣೆ ಮುಂತಾದ ಹೊಸ ಹೊಸ ಶಬ್ದಗಳು ಜನ ಸಾಮಾನ್ಯರಿಗೆ ಪರಿಚಿತವಾಗುತ್ತಿವೆ. ಹಳ್ಳಿಗಳಲ್ಲಿ ಜನರು ಈ ವಿಧಾನಗಳ ಮೂಲಕ ನೀರಿನ ರಕ್ಷಣೆಗೆ ಮುಂದಾಗುತ್ತಿದ್ದಾರೆ. ಅಲ್ಲಲ್ಲಿ ನೀರಿಂಗಿಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಸ್ವಂತಮನೆ, ಭೂಮಿಯಿದ್ದವರು ಈ ಕ್ರಮಗಳನ್ನು ಪಾಲಿಸಬಹುದು ಆದರೆ ಪಟ್ಟಣ, ನಗರಗಳಲ್ಲಿ ಅದು ಬಹು ಮಹಡಿ ಕಟ್ಟಡಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುವ ಜನರಿಗೆ ನೀಡಬಹುದಾದ ಸಲಹೆಗಳೇನು? ಬಹು ಮಹಡಿ ಕಟ್ಟಡಗಳಲ್ಲೂ ಕೊಳವೆ ಬಾವಿಗಳಿದ್ದರೆ ಜಲ ಪೂರಣಾಕ್ರಮಗಳನ್ನು ಎಲ್ಲರೂ ಸೇರಿ ಕೈಗೊಳ್ಳಬಹುದು. ಜನರಲ್ಲಿ ಒಗ್ಗಟ್ಟು, ಒಮ್ಮತ ಮುಖ್ಯ ಅಷ್ಟೆ. ಉಳಿಸಿದ ಒಂದೊಂದು ಹನಿಯೂ ಮುಖ್ಯವೇ. ನಲ್ಲಿಯಲ್ಲಿ ಬರುವ ನೀರೆಲ್ಲವನ್ನು ಖರ್ಚುಮಾಡುವ ಹಕ್ಕು ನಿಮ್ಮದೆಂದು ಭಾವಿಸದಿರಿ. ಮನೆಯ ನಲ್ಲಿಗಳು ಸೋರುತ್ತಿದ್ದರೆ ಮೊದಲು ದುರಸ್ಥಿಮಾಡಿಸಿ. ಆದಷ್ಟೂ ಮಿತವಾಗಿ ನೀರನ್ನು ಬಳಸಿ. ಮಕ್ಕಳಿಗೆ ಹಣದ ಬಗ್ಗೆ ಇತರ ಜವಾಬ್ದಾರಿಗಳ ಬಗ್ಗೆ ತಿಳಿ ಹೇಳುವ ಹಾಗೆ ನೀರಿನ ಮಿತ ಬಳಕೆಯ ಬಗ್ಗೆಯೂ ಕಿವಿ ಮಾತು ಹೇಳುತ್ತಿರಿ. ನೀರಿನ ಉಳಿತಾಯ ಹಾಗು ಸಂರಕ್ಷಣೆ ಪ್ರತಿಯೊಬ್ಬರ ಸಾಮಾಜಿಕ ಜವಾಬ್ದಾರಿ. ನೆನಪಿರಲಿ.

(ಸಾಭಾರ – ಸಿರಿಸಮೃದ್ಧಿ)

***

ಎತ್ತಿನಗಾಡಿಯ ಆರ್ಥಿಕ ಲಾಭ

– ಎಸ್. ಎಸ್. ರಾಮಸ್ವಾಮಿ.

ಭಾರತದ ಸಮಾಜವನ್ನು ಅಭ್ಯಸಿಸುವವನಿಗೆ ವಿರುದ್ಧ ರೂಪದ ಎರಡು ಚಿತ್ರಗಳು ಕಾಣುತ್ತವೆ. ಕಡು ಬಡತನದ ಮಧ್ಯೆ ಕಣ್ಣು ಕೋರೈಸುವ ಶ್ರೀಮಂತಿಕೆ, ನೆಲಕಚ್ಚಿರುವ ಕೊಂಪೆಯ ಗುಡಿಸಲುಗಳ ಹಿನ್ನೆಲೆಯಲ್ಲಿ ಗಗನಚುಂಬಿ ಭವನಗಳು, ಒರಟು ಮತ್ತು ಸಾಂಪ್ರದಾಯಿಕ ಜೀವನ ಮತ್ತು ಕೆಲಸದ ವಿಧಾನದ ಜೋತೆಯಲ್ಲೇ ಉನ್ನತ ಮಟ್ಟದ ವೈಜ್ಞಾನಿಕ ಸಾಧನೆಗಳು, ಇತ್ಯಾದಿ. ಹಿಂದಿನಿಂದ ಬಂದಿರುವ ಎತ್ತಿನಗಾಡಿಯು ಇಂಥ ದ್ವಿಮುಖ ಸಮಾಜಕ್ಕೆ ಒಂದು ರೀತಿಯಲ್ಲಿ ಶಾಶ್ವತ ಉದಾಹರಣೆಯಾಗಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಾವು ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹ ವೈಜ್ಞಾನಿಕ ಹಾಗೂ ತಾಂತ್ರಿಕ ಪರಿಣತಿಯನ್ನು ಪಡೆದಿದ್ದರೂ, ಕಳೆದ ಶತಮಾನದ ಕೊಡುಗೆಯಾಗಿ ಬಂದ ಎತ್ತಿನಗಾಡಿಯ ವಿನ್ಯಾಸದಲ್ಲಿ ಮಾತ್ರ ಯಾವ ಬದಲಾವಣೆಯೂ ಆಗದೆ ಹಿಂದೆ ಆಗಿದ್ದಷ್ಟೇ ಪ್ರಗತಿ ಇಂದಿಗೂ ಉಳಿದುಬಂದಿದೆ.

ಇಷ್ಟರಮಟ್ಟಿನ ತಿರಸ್ಕಾರಕ್ಕೆ ಒಳಗಾಗುವಷ್ಟು, ಎತ್ತಿನಗಾಡಿಯ ಸಾಗಾಣಿಕಾ ಪದ್ಧತಿ, ಈ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಅಮುಖ್ಯವೆ? ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಅದು ಖಂಡಿತಾ ಅಮುಖ್ಯ ಅನ್ನಿಸುವುದಿಲ್ಲ. ಭಾರತದಲ್ಲಿ ಸುಮಾರು ಹದಿಮೂರು ಲಕ್ಷದಷ್ಟು ಪ್ರಾಣಿಗಳು ಎಳೆಯುವ ಗಾಡಿಗಳಿವೆ. ಅದರಲ್ಲಿ ಎತ್ತಿನ ಗಾಡಿಗಳ ಸಂಖ್ಯೆ ಬಹಳ ದೊಡ್ಡದು. ಈ ದೇಶದಲ್ಲಿ ವರ್ಷಕ್ಕೆ ೩೦,೦೦೦ ದಶಲಕ್ಷ ರೂಗಳನ್ನು ಪ್ರಾಣಿಗಳು ಎಳೆಯುವಗಾಡಿ ಸಾಗಾಣಿಕಾ ಪದ್ಧತಿಯಲ್ಲಿ ಹೂಡಲಾಗುತ್ತಿದೆ. [ಇದು ಪ್ರಾಣಿಗಳ ಬೆಲೆಯನ್ನು ಸೇರಿ] ಈ ಬಂಡವಾಳ, ಭಾರತದ ರೈಲ್ವೆ ಇಲಾಖೆಯು ಹೂಡಿರುವ ಬಂಡವಾಳಕ್ಕಿಂತ ಅತಿ ಕಡಿಮೆಯಾದ್ದದ್ದೇನಲ್ಲ. ಈವತ್ತಿಗೂ, ಹಳ್ಳಿಯಿಂದ ಹಳ್ಳಿಗೆ, ಹಳ್ಳಿಯಿಂದ ತಾಲ್ಲೋಕು ಕೇಂದ್ರಕ್ಕೆ ಹೋಗಲು ಎತ್ತಿನಗಾಡಿಯ ಸಾಗಾಣಿಕಾ ಪದ್ಧತಿಯೇ ಮುಖ್ಯವಾದದ್ದು. ಭಾರತದ ಬಹುತೇಕ ಭಾಗಗಳಲ್ಲಿ, ಹಳ್ಳಿಗಳಿಂದ ಸರಕುಗಳನ್ನು ಸಂತೆಗೋ ಅಥವಾ ಮಾರುಕಟ್ಟೆಗೋ ಸಾಗಿಸಲು ಎತ್ತಿನ ಗಾಡಿಗಳನ್ನು ಉಪಯೋಗಿಸುತ್ತಾರೆ. ಆದರೆ ಎತ್ತಿನ ಗಾಡಿಗಳಲ್ಲಿ ವರ್ಷಕ್ಕೆ ಸಾಗಿಸುವ ಸರಕಿನ ಒಟ್ಟು ತೂಕದ ಬಗ್ಗೆ ನಿಖರವಾಗಿ ತಿಳಿಸುವ ಅಂಕಿ ಅಂಶಗಳನ್ನು ಸಂಗ್ರಹಿಸಿಲ್ಲ. ಒಂದು ವರದಿಯ ಪ್ರಕಾರ ಅದು ೧೦,೦೦೦ ದಶಲಕ್ಷ ಟನ್ನುಗಳಿರಬಹುದೆಂದು ಅಂದಾಜು ಮಾಡಲಾಗಿದೆ. ದೇಶದ ಸುಮಾರು ಇಪ್ಪತ್ತು ದಶಲಕ್ಷ ಜನರು, ಒಂದಲ್ಲ ಒಂದು ರೀತಿಯಲ್ಲಿ, ಕೆಲಕಾಲ

ಅಥವಾ ಪೂರ್ಣಾವಧಿಕಾಲ, ಈ ಸಾಗಾಣಿಕಾ ಪದ್ಧತಿಯ ಕೆಲಸಗಳಲ್ಲಿ ತೊಡಗಿದ್ದಾರೆ.

ನಮ್ಮ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಇಷ್ಟೊಂದು ಮುಖ್ಯವಾಗಿರುವ, ಇಂಥ ಮುಖ್ಯ ವಿಚಾರದ ಬಗ್ಗೆ, ಯೋಜನೆಯ ದಾಖಲೆಗಳಲ್ಲಿ ಏನೇನೂ ಪ್ರಸ್ತಾಪವಿಲ್ಲ.

ಈ ದೇಶದ ಅನೇಕ ಬುದ್ಧಿವಂತ ಅರ್ಥಶಾಸ್ತ್ರಜ್ಞರು ನಮಗೆ ಟೆಕ್ನಾಲಜಿ ಬೇಕು ಎಂದು ಕೊಡುವ ಸಾವಿರ ಮಾತಿನ ವಿವರಗಳು ಸಾಕಷ್ಟು ಪ್ರಸಿದ್ಧವಾಗಿವೆ. ಪೆಟ್ರೋಲಿಗಾಗಿ ಪರದಾಡುತ್ತಿರುವ ಮತ್ತು ಮಲಿನ ವಾತಾವರಣದಿಂದ ನಿಧಾನವಾಗಿ ಹದಗೆಡುತ್ತಿರುವ ನಮ್ಮ ವಿಶೇಷ ಪರಿಸ್ಥಿತಿಗೆ ಎತ್ತಿನ ಗಾಡಿಗಿಂತಲೂ ಸರಿಯಾದ ಟೆಕ್ನಾಲಜಿ ಬೇರೆ ಯಾವುದಿದೆ? ಪ್ರಪಂಚದಲ್ಲೆ ಹೆಚ್ಚು ತಾಂತ್ರಿಕ ಸಿಬ್ಬಂದಿಯನ್ನು ಹೊಂದಿರುವ ದೇಶಗಳಲ್ಲಿ ಮೂರನೆಯ ದೇಶವೆಂದು ಹೇಳಿಕೊಳ್ಳುವ ನಾವು, ಎತ್ತಿನ ಗಾಡಿಯ ವಿನ್ಯಾಸದ ಬಗ್ಗೆ ಅಲ್ಲಲ್ಲಿ ಸಮಯ ಸ್ಫೂರ್ತಿಯಿಂದ ಮಾಡಿರುವ ಸಣ್ಣ ಪುಟ್ಟ ಪ್ರಗತಿ ಬಿಟ್ಟರೆ, ಅದರ ಬಗ್ಗೆ ವಿಷಾದದ ಛಾಯೆ ಮೂಡಿಸುತ್ತದೆ. ಮುನ್ನೂರಕ್ಕೂ ಮಿಕ್ಕಿದ ತಾಂತ್ರಿಕ ಸಂಸ್ಥೆಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಇರುವ ಈ ದೇಶದಲ್ಲಿ ಎತ್ತಿನ ಗಾಡಿಯ ರಚನೆಯನ್ನು ಉತ್ತಮಪಡಿಸಲು ಯೋಚಿಸಲು ಅವರಿಗೆ ಸಮಯಾವಕಾಶ ಇಲ್ಲವೇನೊ? ಅಥವಾ ಸಮಾಜದ ಸದ್ಯದ ಮೌಲ್ಯ ಪದ್ಧತಿ ಮತ್ತು ಈಗಿನ ಸಾಮಾಜಿಕ ಅಗತ್ಯಗಳಿಗಾಗಿ, ಎತ್ತಿನ ಗಾಡಿಯ ಬಗ್ಗೆ ಮಾತಾಡುವುದು ಒಂದು ದುಸ್ಸಾಹಸವೇ ಆಗಬಹುದು. ಇತ್ತೀಚೆಗೆ, ಎತ್ತಿನ ಗಾಡಿಯ ಆಧುನೀಕರಣದ ಬಗ್ಗೆ ಚರ್ಚೆ ನಡೆಯುತ್ತಿರುವುದು ಕೆಲವು ಜನರಿಗೆ ಅಸಮಾಧಾನವನ್ನು ಉಂಟುಮಾಡಿದೆ. ಹತ್ತಾರು ವರ್ಷಗಳಿಂದಲೂ ತಿರಸ್ಕಾರಕ್ಕೆ ಯೋಗ್ಯ ಅಂದುಕೊಂಡಿದ್ದ ಈ ಕ್ಷೇತ್ರದ ಬಗ್ಗೆ ಈಚೀಚೆಗೆ ಸರ್ಕಾರಿ ವಲಯಗಳು ಆಲೋಚಿಸುತ್ತಿರುವುದು ಸಂತೋಷದ ವಿಷಯ.

ಮೇಲೆ ಹೇಳಿದ ಎಲ್ಲಾ ವಿಚಾರಗಳಿಂದ ಎತ್ತಿನ ಗಾಡಿಯನ್ನು ಆಧುನೀಕರಿಸಬೇಕೆಂಬುದು ನಿರ್ವಿವಾದ. ತಾಂತ್ರಿಕ, ಆರ್ಥಿಕ ಮಾನವಿಕ ಕಾರಣಗಳಿಂದ ಆಧುನೀಕರಣ ಮಾಡಬೇಕೆಂದು ಅದಕ್ಕೆ ಸಂಬಂದ ಪಟ್ಟ ವಿಧಾನಗಳ ಪರಿಶೀಲನೆಗೆ ತೊಡಗುವುದರ ಮೊದಲು, ಅಂತಹ ಆಧುನೀಕರಣ ಬೇಕೆ ಎಂದು ಆಲೋಚಿಸಬೇಕಾಗುತ್ತದೆ. ಎತ್ತಿನ ಗಾಡಿಗಳನ್ನು ರದ್ದುಪಡಿಸಬೇಕೆಂದು ಹೇಳುತ್ತಾರೆ ನಿಜ, ಪ್ರಾಣಿಗಳಿಗಾಗುವ ಹಿಂಸೆ ಮತ್ತು ಇನ್ನೂ ಅನೇಕ ದೃಷ್ಟಿಗಳಿಂದ ನೋಡಿದರೆ ಎತ್ತಿನಗಾಡಿ ಸಾಗಾಣಿಕಾ ಪದ್ಧತಿಯನ್ನು ರದ್ದುಪಡಿಸುವುದೇ ಸೂಕ್ತ ಎಂದು ತೋರುತ್ತದೆ. ಆದರೆ ನಮ್ಮ ದೇಶದ ಪ್ರಸಕ್ತ ಪರಿಸ್ಥಿತಿಯನ್ನು ಗಮನಿಸಿದರೆ ಎತ್ತಿನಗಾಡಿ ಸಾಗಾಣಿಕಾ ಪದ್ಧತಿ ಇನ್ನೂ ಅನೇಕ ದಶಕಗಳ ಕಾಲ ಈ ದೇಶದಲ್ಲಿ ಉಳಿಯುತ್ತದೆಂದು ಹೇಳಬಹುದು. ಮೊದಲನೆಯದಾಗಿ ಇದಕ್ಕೆ ಪರ್ಯಾಯವಾದ

ಮತ್ತು ಅಗ್ಗದ ಸಾಗಾಣಿಕಾವ್ಯವಸ್ಥೆ ಇಲ್ಲ. ಎರಡನೆಯದಾಗಿ, ಇದರ ಬದಲು ಮೋಟಾರು ಲಾರಿಗಳನ್ನು ಉಪಯೋಗಿಸಲು ದೊಡ್ಡ ಬಂಡವಾಳ ಬೇಕಾಗುತ್ತದೆ. ಮೂರನೆಯದಾಗಿ ಹಳ್ಳಿ ರಸ್ತೆಗಳಲ್ಲಿ ಮತ್ತು ಸಣ್ಣ ಸಣ್ಣ ದೂರಗಳಿಗೆ ಸಾಗಿಸಲು, ರೈತರಿಗೆ ಎತ್ತಿನಗಾಡಿ ಸಾಗಾಣೀಕೆಯೇ ಇನ್ನೂ ಎಷ್ಟೋ ಕಾಲದವರೆಗೆ ಅತ್ಯುತ್ತಮ ಪರಿಹಾರ ಅನ್ನಬಹುದು. ಸದ್ಯದಲ್ಲಿ ಅದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಲು ಸಾಧ್ಯವಿಲ್ಲ. ಎತ್ತಿನಗಾಡಿಗಳನ್ನು ಸಾಮಾನ್ಯವಾಗಿ ಕಚ್ಚಾರಸ್ತೆಗಳಲ್ಲಿ, ಹೊಲಗದ್ದೆಗಳಲ್ಲಿ ಓಡಾಡಿಸುತ್ತಾರೆ. ಇಂಥ ಓಡಾಟಕ್ಕೆ ಈಗ ಲಭ್ಯವಿರುವ ಮೋಟಾರು ಲಾರಿಗಳು ಉಪಯೋಗವಿಲ್ಲ. ಆದ್ದರಿಂದಲೇ ಈಗ ನಾವು ಎತ್ತಿನಗಾಡಿ ವಿನ್ಯಾಸವನ್ನು ಪುನಃ ಪರಿಶೀಲಿಸಲು ಮತ್ತು ಆಧುನೀಕರಿಸಲು ಪ್ರಯತ್ನ ಪಡಲಾಗುತ್ತಿದೆ. ಇದರಿಂದ ಈ ವ್ಯವಸ್ಥೆ ಪ್ರಾಣಿಗಾಗುವ ಹಿಂಸೆಗಳ ಸದ್ಯದ ಲೋಪದೊಷಗಳನ್ನು ಸ್ವಲ್ಪ ಮಟ್ಟಿಗೆ ಉತ್ತಮಪಡಿಸಿದಂತಲೂ [ಪೂರ್ತಿಯಾಗಲ್ಲದಿದ್ದರೂ] ಮತ್ತು ಉತ್ಪತ್ತಿಯನ್ನು ವ್ಯವಹಾರಯೋಗ್ಯವನ್ನಾಗಿಯೂ ಮಾಡಿದಂತಲೊ ಆಗುತ್ತದೆ. ಗಾಡಿಯ ವಿನ್ಯಾಸವನ್ನು ಉತ್ತಮಪಡಿಸಲು ಅಲ್ಲಲ್ಲಿ ಕೆಲವು ಪ್ರಯತ್ನಗಳು ನಡೆದಿವೆ. ಕೆಟ್ಟುಹೋದ ಲಾರಿಯ ದೂರಿ ಮತ್ತು ಚಕ್ರಗಳನ್ನು ಗಾಡಿಗೆ ಜೋಡಿಸುವುದರಲ್ಲೋ, ಪ್ರಾಣಿಗಳು ಎಳೆಯಬಹುದಾದ ರೀತಿಯಲ್ಲಿ ರಬ್ಬರ್ ಪಟ್ಟೆಗಳನ್ನು ಜೋಡಿಸುವುದರಲ್ಲೋ ಇಂಥಹ ಪ್ರಯತ್ನಗಳು ಮುಗಿದುಹೋಗಿವೆ. ಆದರೂ, ಈ ಪ್ರಯತ್ನಗಳು ಗಾಡಿಯ ವಿನ್ಯಾಸದ ಲೋಪದೊಷಗಳನ್ನು ಸ್ವಲ್ಪಮಟ್ಟಿಗೆ ಸರಿಪಡಿಸಿದೆ.

ಆದರೆ, ಹಾಗೆ ಸುಧಾರಿಸುವಾಗ ಅನೇಕ ಹೊಸ ಸಮಸ್ಯೆಗಳನ್ನು ಹುಟ್ಟಿಸಿವೆ. ಈ ಸುಧಾರಣೆಗಳು ಎಷ್ಟೆ ಸಣ್ಣದಾಗಿದ್ದರೂ ಇದರಿಂದ ಎತ್ತಿನಗಾಡಿಯ ಎಳೆಯುವ ಸಾಮರ್ಥ್ಯವನ್ನು ಶೇ.೧೦೦ ರಷ್ಟೂ, ಉತ್ಪತ್ತಿಯನ್ನು ಮೊದಲ ಮೂರರಷ್ಟೂ ಹೆಚ್ಚಿಸಲು ಸಹಾಯವಾಯಿತೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ವಿಷಯದಲ್ಲಿ ಮಾಡಿದ ಸಮೀಕ್ಷಾ ಅಧ್ಯಯನದಿಂದ, ಹೀಗೆ ಸುಧಾರಿಸಿದ ಎತ್ತಿನಗಾಡಿ ಸಾಗಾಣಿಕೆಯಿಂದ ಬರುವ ಉತ್ಪತ್ತಿ ಶೇಕಡ ೩೦ರಷ್ಟು ಏರಿಕೆ ಅನ್ನುವುದು ಗೊತ್ತಾಗುತ್ತದೆ. ಆದ್ದರಿಂದ ನಮ್ಮ ಪರಿಸ್ಥಿತಿಗೆ, ಎತ್ತಿನಗಾಡಿ ಸಾಗಾಣಿಕೆ, ಆರ್ಥಿಕವಾಗಿ ಸರಿಯಿರುವ ಒಂದು ಸಲಹೆ ಎಂದು ಹೇಳಬಹುದು.

ಎತ್ತಿನ ಗಾಡಿಗಳನ್ನು ಆಧುನೀಕರಿಸುವುದರಿಂದ, ಗ್ರಾಮೀಣ ಆರ್ಥಿಕಾಭಿವೃದ್ಧಿಯನ್ನು ತುಂಬಾ ಹೆಚ್ಚಿಸಬಹುದು. ಮೊದಲನೆಯದಾಗಿ, ಬೇಸಾಯ ಕ್ಷೇತ್ರದಲ್ಲಿ ನಡೆಯುತ್ತಿರುವ ಹೆಚ್ಚಿನ ಚಟುವಟಿಕೆಗಳಿಂದ ಅದಕ್ಕೆ ಬೇಕಾಗುವ ಸಾಗಾಣಿಕಾ ಬೇಡಿಕೆಯನ್ನು ಆಧುನೀಕರಿಸಿದ ಮತ್ತು ಸಾಗಾಣಿಕಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿರುವ ಎತ್ತಿನ ಗಾಡಿ ಸಾಗಾಣಿಕೆ ಪೂರೈಸಬಲ್ಲದು. ಎತ್ತಿನಗಾಡಿ

ಸಾಗಾಣಿಕಾವ್ಯವಸ್ಥೆಯಲ್ಲಿ ಇರುವ ಉದ್ಯೋಗ ಅವಕಾಶಗಳು ತುಂಬಾ ಆಸಕ್ತಿಯನ್ನು ಉಂಟು ಮಾಡುತ್ತದೆ. ಈಗ ಎತ್ತಿನ ಗಾಡಿ ಸಾಗಾಣಿಕಾ ವ್ಯವಸ್ಥೆಯಲ್ಲಿ ೨೦ದಶಲಕ್ಷಕ್ಕೂ ಮೀರಿ ಉದ್ಯೋಗಾವಕಾಶಗಳಿವೆ. ಇದು ಯಾವ ಸಂಘಟಿತ ಕ್ಷೇತ್ರ ಅಥವಾ ಸರಕಾರಿ ಕ್ಷೇತ್ರ ಒದಗಿಸುವ ಉದ್ಯೋಗಾವಕಾಶಗಳಿಗಿಂತ ಕಡಿಮೆಯೇನಲ್ಲ. ಸುಧಾರಿಸಿದ ವಿನ್ಯಾಸದಿಂದ ಎತ್ತಿನ ಗಾಡಿಯ ಸಾಗಾಣಿಕಾ ಸಾಮರ್ಥ್ಯ ದ್ವಿಗುಣಗೊಂಡರೆ ಅದರಿಂದ ಬರುವ ಉತ್ಪತ್ತಿ ತ್ರಿಗುಣಗೊಳ್ಳುತ್ತದೆ. ಇದರಿಂದ ಎತ್ತಿನ ಗಾಡಿ ಸಾಗಾಣಿಕೆಯ ಆರ್ಥಿಕ ಬುನಾದಿ ಸರಿಯಾಗಿದೆ ಎಂದು ಹೇಳ ಬೇಕಾಗುತ್ತದೆ. ಆದ್ದರಿಂದ ಬೇಸಾಯೋತ್ಪನ್ನ ಕೈಗಾರಿಕೆಗಳವರು ಮತ್ತು ಬ್ಯಾಂಕುಗಳವರು ಎತ್ತಿನಗಾಡಿಯ ಸಾಗಾಣಿಕೆಗೆ ಬೇಕಾಗುವ ಬಂಡವಾಳವನ್ನು ಕೊಡಲು ಮುಂದೆ ಬರಬಹುದು. ಉದಾಹರಣೆಗೆ : ಸಕ್ಕರೆ ಕಾರ್ಖಾನೆ, ಹತ್ತಿಗಿರಣಿಗಳು, ಹೊಗೆಸೊಪ್ಪು ಕಾರ್ಖಾನೆಗಳು ತಮಗೆ ಬೇಕಾಗುವ ಕಚ್ಚಾವಸ್ತುಗಳನ್ನು ಅವುಗಳು ಬೆಳೆಯುವ ಸ್ಥಳದಿಂದ ಕಾರ್ಖಾನೆಯ ಸ್ಥಳದವರೆಗೆ ಸಾಗಿಸಲು, ಎತ್ತಿನ ಗಾಡಿ ಸಾಗಾಣಿಕೆ ವ್ಯವಸ್ಥೆಯನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಬಹುದು. ಸಕ್ಕರೆ ಕಾರ್ಖಾನೆಗಳು ಈ ವಿಷಯದಲ್ಲಿ ಇತ್ತೀಚಿಗೆ ಮಾಡಿದ ಸಮೀಕ್ಷಾ ಅಧ್ಯಯನದಿಂದ, ಕೆಲವು ಸ್ವಾರಸ್ಯಕರ ಸಂಗತಿಗಳು ಹೊರಬಿದ್ದಿವೆ. ಅದರಂತೆ, ಕಾರ್ಖಾನೆಯ ಐದು ಮೈಲಿಗಳ ಫಾಸಲೆಯವರೆಗಿನ ಸಾಗಾಣಿಕೆಗೆ ಎತ್ತಿನಗಾಡಿ ಸಾಗಾಣಿಕೆ ಕಡಿಮೆ ಖರ್ಚಿನಿಂದಾಗಿರುವುದಲ್ಲದೆ, ಒಂದು ಸಾಧುವಾದ ಕ್ರಮವೂ ಆಗಿದೆ. ಎತ್ತಿನಗಾಡಿಯ ಸಾಗಾಣಿಕೆ ವ್ಯವಸ್ಥೆಯಲ್ಲಿ, ಲಾರಿ, ಟ್ರಕ್ಕು ಸಾಗಾಣಿಕಾ ವ್ಯವಸ್ಥೆಗಿಂತ ಮೂರು ಪಟ್ಟು ಜಾಸ್ತಿ ಉದ್ಯೋಗವಕಾಶಗಳಿದ್ದರೆ, ಬಂಡವಾಳ ಅದರ ಮೂರನೇ ಒಂದು ಭಾಗದಷ್ಟು ಮಾತ್ರ ಸಾಕಾಗುತ್ತದೆ. ಅದರಲ್ಲೂ ಕುಶಲಕರ್ಮಿಗಳಿಲ್ಲದ ಹಳ್ಳಿಯ ಜನರಿಗೆ ಉದ್ಯೋಗಗಳನ್ನು ಒದಗಿಸುವುದರಲ್ಲಿ ಎತ್ತಿನಗಾಡಿ ಸಾಗಾಣಿಕಾ ವ್ಯವಸ್ಥೆ ಮಹತ್ತರ ಪಾತ್ರ ನಿರ್ವಹಿಸಬಹುದಾಗಿದೆ.

ಹಿಂದೆ ಇದ್ದ ಎತ್ತಿನಗಾಡಿ ತಯಾರಿಕೆಗೆ ಬೇಕಾಗುವುದಕ್ಕಿಂತ ಸುಧಾರಿಸಿದ ಎತ್ತಿನಗಾಡಿ ತಯಾರಿಕೆಗೆ ಹೆಚ್ಚು ಬಂಡವಾಳ ಬೇಕಾಗುತ್ತಿರುವುದೇ ಈಗಿನ ಮುಖ್ಯ ಸಮಸ್ಯೆಯಾಗಿದೆ. ಹಿಂದಿನ ರೀತಿಯ ಎತ್ತಿನಗಾಡಿ ತಯಾರಿಕೆಗೆ ಸುಮಾರು ೨೪೦೦ ರೂಪಾಯಿಗಳು ಬೇಕಾಗುತ್ತಿದ್ದರೆ ಈಗಿನ ಸುಧಾರಿಸಿದ ರೀತಿಯ ಎತ್ತಿನಗಾಡಿ ತಯಾರಿಕೆಗೆ ಅತಿ ಹೆಚ್ಚು ಬೆಲೆಯಾಗುತ್ತಿದೆ. ಆದ್ದರಿಂದ ಈಗ ಗಾಡಿ ಹೊಂದಿರುವವರೆಗೆ ಇಷ್ಟೊಂದು ದೊಡ್ಡ ಬಂಡವಾಳವನ್ನು ಕೂಡಿಸುವುದು ಕಷ್ಟವಾಗುತ್ತಿದೆ. ಬೇಕಾಗುವ ಬಂಡವಾಳಕ್ಕೆ, ಈ ಜನರು ಸಾಮಾನ್ಯವಾಗಿ ಶೇ.೬೦ ರಿಂದ ಶೇ.೮೦ ರಷ್ಟು ಬಡ್ಡಿ ಕೇಳುವ ಲೇವಾದೇವಿಗಾರರನ್ನು ಅವಲಂಬಿಸಿದ್ದಾರೆ.

ಆದ್ದರಿಂದ ಗಾಡಿಗಳನ್ನು ಆಧುನೀಕರಿಸುವುದರ ಜೊತೆಗೆ, ಹಣಕಾಸು ಸರಬರಾಜುಮಾಡುವ ಸಂಸ್ಥೆಗಳನ್ನು ವ್ಯವಸ್ಥೆಗೊಳಿಸುವುದು ಬಹಳ ಮುಖ್ಯವಾಗುತ್ತದೆ.

ಉತ್ತಮ ಚಕ್ರಗಳು ಮತ್ತು ದೂರಿಗಳು ಮತ್ತು ಎಳೆಯುವ ಸಾಮರ್ಥ್ಯವನ್ನು ಹೆಚ್ಚಿಸುವುದು ಮುಂತಾದ ಕ್ರಮಗಳಿಂದ ತಾಂತ್ರಿಕ ಲೋಪದೋಷಗಳನ್ನು ಸುಧಾರಿಸಿದ ಎತ್ತಿನಗಾಡಿಯಲ್ಲಿ ನಿವಾರಿಸಲಾಗಿದೆ. ಆದರೆ ಗಾಳಿ ತುಂಬಿದ ರಬ್ಬರ್ ಚಕ್ರಗಳನ್ನು ಅಳವಡಿಸಿದ್ದರಿಂದ ಅನೇಕ ಹೊಸ ತೊಂದರೆಗಳು ಸೃಷ್ಟಿಯಾಗಿವೆ. ಅದರಲ್ಲೂ ಕಚ್ಚಾ ರಸ್ತೆಗಳಲ್ಲಿ ಹೋಗಬೇಕಾಗಿ ಬಂದಾಗ ಸಮಸ್ಯೆ ತೀವ್ರವಾಗುತ್ತದೆ. ರಬ್ಬರ್ ಚಕ್ರದ ಎತ್ತಿನಗಾಡಿಗಳು ಹಳ್ಳಿಯ ಗುಂಡಿಗಳುಳ್ಳ ರಸ್ತೆಗಳಲ್ಲಿ ಹೆಚ್ಚು ಉಪಯೋಗಕ್ಕೆ ಬರುವುದಿಲ್ಲ. ಮರದ ಚಕ್ರಗಳ ವ್ಯಾಸ ದೊಡ್ಡದಿರುವುದರಿಂದ ಇಂಥ ಗುಂಡಿಗಳನ್ನು ದಾಟಿಹೊಗುತ್ತವೆ. ಆದರೆ ಸಣ್ಣ ವ್ಯಾಸದ ರಬ್ಬರ್ ಚಕ್ರಗಳು ಗುಂಡಿಗಳಲ್ಲಿ ಸಿಕ್ಕಿಕೊಳ್ಳುತ್ತವೆ ಮತ್ತು ಚಕ್ರಗಳಿಗೆ ತೂತು ಬಿದ್ದು ಗಾಳಿ ಹೋಗುವ ಸಾಧ್ಯತೆ ಇದ್ದೇ ಇರುತ್ತದೆ. ಹಳ್ಳಿಗಳಲ್ಲಿ ಅವುಗಳನ್ನು ಸರಿಮಾಡುವ ಅನುಕೂಲತೆಗಳು ಇರುವುದಿಲ್ಲ. ಗಾಡಿ ಮತ್ತು ನೆಲ ಸಮಾನಾಂತರ ಮಟ್ಟದಲ್ಲಿ ಇರದಿರುವುದರಿಂದ ಗಾಡಿಯಲ್ಲಿ ಸರಕನ್ನು ಎಳೆಯುವುದರ ಜೊತೆಗೆ ಎತ್ತುಗಳ ಹೆಗಲ ಮೇಲೆ ಬೀಳುವ ಅನಧಿಕ ಭಾರವನ್ನು ತಪ್ಪಿಸಲು ಈ ಸುಧಾರಣೆಗಳು ಏನನ್ನೂ ಸೂಚಿಸಿಲ್ಲ ಮತ್ತು ಗೊದಮ[ಬ್ರೇಕ್] ವನ್ನು ರೂಪಿಸಿಲ್ಲ. ಕೆಲವು ನ್ಯೂನತೆಗಳಿಂದಾಗಿ, ಸುಧಾರಿಸಿದ ಎತ್ತಿನಗಾಡಿಯು ಹಳೆಯ ಎತ್ತಿನಗಾಡಿಗಳಿಗಿಂತ, ಎತ್ತುಗಳಿಗೆ ಹೆಚ್ಚು ಹಿಂಸಾದಾಯಿಕವಾಗಿರುತ್ತದೆ. ಕಚ್ಚಾರಸ್ತೆಗಳಲ್ಲಂತೂ ಎತ್ತುಗಳಿಗೆ ತುಂಬಾ ಹಿಂಸೆಯಾಗುತ್ತದೆ. ಟೈರು,ಟ್ಯೂಬುಗಳ ಅಭಾವ, ಸಮಸ್ಯೆಯನ್ನು ಇನ್ನೂ ಜಟಿಲಗೊಳಿಸುತ್ತದೆ. ಗಾಡಿತಯಾರಿಸಲು, ಸ್ಥಳದಲ್ಲೆ ಯಥೇಚ್ಚವಾಗಿ ದೊರೆಯುವ ವಸ್ತುಗಳನ್ನು ಬಿಟ್ಟು, ಅಭಾವವಿರುವ ವಸ್ತುಗಳನ್ನು ಉಪಯೋಗಿಸಲು ಪ್ರಯತ್ನಪಡುವುದು ಈ ಸನ್ನಿವೇಶದಲ್ಲಿ ಸರಿಯೇ ಎಂದು ಯೋಚಿಸಬೇಕಾಗುತ್ತದೆ. ಎತ್ತಿನಗಾಡಿಯ ವಿನ್ಯಾಸದಲ್ಲಿನ ಸುಧಾರಣೆ ಅದರ ತಯಾರಿಕಾ ವೆಚ್ಚವನ್ನು ತಗ್ಗಿಸಬೇಕು. ಗಾಡಿಯು ಮುಖ್ಯ ಭಾಗಗಳಾದ ದೂರಿ, ಬೇರಿಂಗ್ ಮುಂತಾದವುಗಳನ್ನು ತಯಾರಿಸುವ ಘಟಕಗಳನ್ನು ಸ್ಥಾಪಿಸುವ ಬಗ್ಗೆ ಯೋಚಿಸಬೇಕು. ಆದರೆ ಇದರಿಂದ ಹಳ್ಳಿಯ ಕುಶಲಕರ್ಮಿಗಳು ಮತ್ತು ಇತರ ಕೆಲಸಗಾರರು ಉದ್ಯೋಗ ಕಳೆದುಕೊಳ್ಳದಿರುವಂತೆ ನೋಡಿಕೊಳ್ಳುವುದು ಮುಖ್ಯವಾಗುತ್ತದೆ.

ಎತ್ತಿನಗಾಡಿ ನೋಡಲು ಸರಳವಾಗಿ ಕಂಡರೂ ತಾಂತ್ರಿಕ ರಚನೆಯೂ

ಬಹು ಸರಳ ಎಂದು ಯಾರೂ ತಿಳಿಯಬಾರದು. ಬೇರೆ ಬೇರೆ–ಕಚ್ಚಾ, ಹೆದ್ದಾರಿ–ರಸ್ತೆಗಳಿಗೆ ಹೊಂದಿಕೊಳ್ಳುವಂತಹ ಮತ್ತು ಬೇರೆ ಬೇರೆ ಸರಕುಗಳನ್ನು–ತರಕಾರಿ, ಕಾಳುಗಳು, ಹತ್ತಿ, ಕಬ್ಬು–ಸಾಗಿಸಲು ಅನುಕೂಲವಾಗುವಂತಹ ಎತ್ತಿನಗಾಡಿಗಳ ಮಾದರಿಯನ್ನು ರಚಿಸಲು ಎಚ್ಚರಿಕೆಯ ಅಧ್ಯಯನದ ಜೊತೆಗೆ ಸಾಕಷ್ಟು ಬುದ್ಧಿಶಕ್ತಿಯನ್ನೂ ಖರ್ಚು ಮಾಡಬೇಕಾಗುತ್ತದೆ. ಕೆಲವು ಸರಕುಗಳ ಸಾಗಾಣಿಕೆಗೆ ಒಂಟೆತ್ತಿನ ಎರಡು ಚಕ್ರದ ಗಾಡಿಗಳು ಉತ್ತಮವಾಗುತ್ತವೆ. ಆದ್ದರಿಂದ ಬೇರೆ ಬೇರೆ ಸನ್ನಿವೇಶಕ್ಕೆ ಬೇರೆ ಬೇರೆಯ ರಚನೆಯನ್ನು ಮಾಡಬೇಕಾಗುತ್ತದೆ. ಗಾಡಿ ಎಳೆಯುವ ಪ್ರಾಣಿಗಳ ಬಗ್ಗೆಯೂ ಸಾಕಷ್ಟು ಅಧ್ಯಯನ ಮಾಡಬೇಕು. ಈಗಂತೂ ಇಂಥ ವಿಚಾರಗಳ ಬಗ್ಗೆ ಏನೇನೂ ನಡೆದಿಲ್ಲ. ಕುದುರೆಗಾಡಿಯಲ್ಲಿ ಮೂಕಿಯ ಕಂಬಿಗಳು ಕುದುರೆಯ ಕತ್ತಿನ ಮೇಲೆ ಬೀಳದೆ, ಕತ್ತಿನ ಎರಡು ಪಕ್ಕದಲ್ಲಿ ಬರುವುದರಿಂದ ಗಾಡಿಗೆ ತುಂಬಿರುವ ಭಾರವನ್ನು ಮಾತ್ರ ಎಳೆಯಬೇಕಾಗುತ್ತದೆ. ಎತ್ತಿನ ಗಾಡಿಯಲ್ಲಿ ಸರಕಿನ ತೂಕದ ಜೊತೆಗೆ ನೊಗ ಕತ್ತಿನ ಮೇಲೆ ಕೂರುವುದರಿಂದ ಉಂಟಾಗುವ ಭಾರವನ್ನೂ ಹೊರಬೇಕಾಗಿದೆ. ಗಾಡಿಯು ಚಲಿಸುವಾಗ, ನೊಗ ಎತ್ತಿನ ಹೆಗಲಿನ ಮೇಲೆ ಜಗ್ಗುವುದರಿಂದ, ಹೆಗಲು ಮತ್ತು ನೊಗ ಉಜ್ಜುವಿಕೆಯಿಂದ ಘರ್ಷಣೆ ಹುಟ್ಟುವುದಲ್ಲದೆ, ಚಲನೆಯಿಂದುಂಟಾಗುವ ಭಾರವನ್ನೂ ಅದು ಹೊರಬೇಕಾಗುತ್ತದೆ. ಈ ರೀತಿಯ ಚಲನೆಯಿಂದ ಸುಮಾರು ೧೦೦ ಕಿ.ಗ್ರಾಂಗಳಷ್ಟು ಭಾರ (ಅಧಿಕ) ಎತ್ತಿನ ಹೆಗಲಿನ ಮೇಲೆ ಬೀಳುತ್ತದೆಂದು, ಇತ್ತೀಚೆಗೆ ಕೊಯಮತ್ತೂರಿನಲ್ಲಿ ನಡೆಸಿದ ಅಧ್ಯಯನದಿಂದ ತಿಳಿದು ಬರುತ್ತದೆ.

ಎತ್ತಿನಗಾಡಿಯ ಸಾಗಾಣಿಕಾ ಪದ್ಧತಿ, ಈಗ ಒಂದು ಸರಿಯಾದ ತಾಂತ್ರಿಕತೆಯಾಗಿ ಅಭ್ಯಸಿಸಲು ಯೋಗ್ಯವಾಗಿದೆ. ಇದಕ್ಕೆ ಗಮನ ಕೊಡುವುದು ಈಗ ಅಗತ್ಯವಾಗಿದೆ. ಗಾಡಿಯ ವಿನ್ಯಾಸ ರಚನೆಯಲ್ಲಿ ಸುಧಾರಣೆ, ಸರಿಯಾದ ಸಂಘಟನೆ ಮತ್ತು ಸರಿಯಾದ ಹಣಕಾಸು ವ್ಯವಸ್ಥೆಯನ್ನು ಎತ್ತಿನಗಾಡಿ ಸಾಗಾಣಿಕಾ ಪದ್ಧತಿಗೆ ಒದಗಿಸಿದರೆ, ಅದು ಎತ್ತಿನಗಾಡಿಯ ಮಾಲೀಕ ಮತ್ತು ನಡೆಸುವವನಿಗೆ ಮಾತ್ರವಲ್ಲದೆ, ದೇಶದ ಇಡೀ ಆರ್ಥಿಕ ವ್ಯವಸ್ಥೆಗೆ ಲಾಭದಾಯಕವಾಗುತ್ತದೆ.

(ಸಾಭಾರ–ಒಡನಾಡಿ)

***

ಸುಬ್ಬುಲಕ್ಷ್ಮಿಯವರನ್ನು ನೆನಪಿಸಿಕೊಂಡು . . . .

– *ಜಿ.ಟಿ. ನಾರಾಯಣರಾವ್*

ಎಮ್. ಎಸ್ ಎಂಬ ಪ್ರಥಾಮಾಕ್ಷರಗಳಿಂದಲೇ ಸರ್ವಪ್ರಥಮರಾಗಿ ಬಾಳಿ, ಅಮರಗಾನ ಹಾಡಿ, ಭಾರತೀಯ ಜೀವನಮೌಲ್ಯದ ಜಂಗಮರೂಪಿಯಾಗಿ ಬೆಳಗಿ, 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಆದರ್ಶ ನೀಡಿ, ಕರ್ಪೂರದಂತೆ ಆತ್ಮ ಸಮರ್ಪಣೆ ಮಾಡಿ ಬೆಳಕು–ಪರಿಮಳ ಬೀರಿ ಚಿರನೇಪಥ್ಯಕ್ಕೆ ಸಂದುಹೊದ ಅ ಮಹಾಚೇತನಕ್ಕೆ ನುಡಿನಮನ ಈ ಲೇಖನ.

ಅವರನ್ನು ನೆನೆವುದೆಂದರೆ ಬಸವಣ್ಣನವರ ಒಂದು ವಚನವನ್ನು ಸ್ಮರಿಸುವುದು ಎಂದರ್ಥ: "ನಡೆ ಚನ್ನ, ನುಡಿಚನ್ನ, ಎಲ್ಲಿ ನೋಡಿದಡಲ್ಲಿ ಚನ್ನ! ಪ್ರಮಥರೊಳಗೆ ಚನ್ನ, ಪುರಾತರೊಳಗೆ ಚನ್ನ, ಸವಿನೋಡಿ ಅಂಬಲಿ ರುಚಿಯಾಯಿತ್ತೆಂದು, ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದು ನಮ್ಮ ಚನ್ನ," ಅಥವಾ ಕನಕದಾಸರ "ಇಂಪು ಸೊಂಪಿನ ಚಂದ್ರಬಿಂಬೆ, ಕೆಂಪು ತುಟಿಗಳ ನಾಸಿಕ ರಂಭೆ, ಜೊಂಪು ಮದನ ಸಿಂಗಾಡಿ ಪೂರ್ಣ ಶಕ್ತಿ ಬೊಂಬೆ, ಒಳ್ಳೆ ಸಂಪಿಗೆ ಮುಡಿಗಿಟ್ಟು ರಾಜಿಪ ಶಾರದಾಂಬೆ" ಕೀರ್ತನೆಯನ್ನು, ಇಲ್ಲವೇ ತ್ಯಾಗರಾಜರ "ಎಂತ ಮುದ್ದೋ! ಎಂತ ಸೊಗಸೋ! ಎವರಿವಲ್ಲ ವರ್ಣಿಂಪತಗುನೇ" ಕೃತಿಯನ್ನು ಹಾಡುವುದು ಎಂದರ್ಥ. ನಿಜ, "ಎಂದರೊ ಮಹಾನುಭಾವುಲಂದರಕಿ ವಂದನಮು!".

ಅವರ ಭೌತ ಜೀವಿತಾವಧಿ ೧೬–೯–೧೯೧೬ ರಿಂದ ೧೧–೧೨–೨೦೦೪ರ ತನಕ, ಸುಮಾರು ೮೯ ವರ್ಷಗಳು. ಇದನ್ನು ವ್ಯಾಪಕವಾಗಿ ಎಮ್ ಎಸ್ ಅವರ heard melodies (ಶ್ರುತಗಾನ) ಅವಧಿ ಎಂದು ಹೆಸರಿಸಿದರೆ ತರುವಾಯದ ಅನಂತಕಾಲವನ್ನು unheard melodies (ಅಶ್ರುತಗಾನ) ಯುಗ ಎಂದು ಅರ್ಥಪೂರ್ಣವಾಗಿ ವಿವರಿಸಬಹುದು. ಕೀಟ್ಸ್ ಕವಿಯ heard melodies are sweet, unheard sweeter ಅಥವಾ ಡಿವಿಜಿಯವರ ಅನುವಾದದಲ್ಲಿ 'ಶ್ರುತಗಾನಮಭಿರಾಮಮಶ್ರುತಗಾನಮಭಿರಾಮತರಂ' ಎಂಬ ಭಾವದ ವಿಸ್ತೃತ ಭಾಷ್ಯವೇ ಸುಬ್ಬುಲಕ್ಷ್ಮಿಯವರ ಜೀವನ ಗಾಥೆ. ಗಾಂಧೀಜಿಯವರಿಗೆ ೭೦ ತುಂಬಿದಾಗ (೧೯೩೯) ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ಸಲ್ಲಿಸಿದ ನುಡಿನಮನದಲ್ಲಿಯ ಒಂದು ಮಾತು ಎಂ ಎಸ್ ಅವರಿಗೂ ಅಷ್ಟೇ ಧ್ವನಿಯುಕ್ತವಾಗಿ ಹೊಂದುತ್ತದೆ. "ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ.".

ಸುಬ್ಬುಲಕ್ಷ್ಮಿಯವರ ದೈವಿಕಗಾನವನ್ನು ಪ್ರತ್ಯಕ್ಷ ಹಲವಾರು ಬಾರಿ ಆಲಿಸಿ ಮತ್ತು ಪಾತ್ರವಹಿಸಿದ ಸಿನೆಮಗಳನ್ನು ನೋಡಿ ಕೃತಾರ್ಥರಾಗಿರುವ ನನ್ನ

ಓರಗೆಯವರು ಭಾಗ್ಯಶಾಲಿಗಳು. ಏಕೆಂದರೆ ಕವಿ ಬೇಂದ್ರೆಯವರ ಮಾತಿನಲ್ಲಿ "ಇದು ಅಲ್ಲೋ ಬರಿದೇ ಗಾನಾ! ಪಂಚಾಮೃತದಾ ಪಾನಾ!" ಆ ಪಂಚ ಅಮೃತಗಳಿವು: ಮಾಧುರ್ಯ, ಸಾಹಿತ್ಯಶುದ್ಧಿ, ಮನೋಧರ್ಮ, ಲಯಗಾಂಭೀರ್ಯ ಮತ್ತು ಲಾವಣ್ಯ. ಅರ್ಥಾತ್ ಅರಿತು ಪಾಡುವಗಳಶುದ್ಧಿ.

ಈ ಮಹಾಕಲಾವಿದೆ ತಮ್ಮ ಬಾಳಿನ ಆರಂಭದಲ್ಲಿ ಎದುರಿಸಿದ ಆತಂಕಗಳು ಅಸಂಖ್ಯ. ದೇವದಾಸಿ ಕುಟುಂಬದ ಶಿಶುವಾಗಿದ್ದುದರಿಂದ ಅಂದಿನ ಸಂಕುಚಿತ ಮತ್ತು ಶ್ವಾಸಬಂಧಕ ಸಾಮಾಜಿಕ ಪರಿಸರದಲ್ಲಿ ಇವರಿಗೆ ಜೀವನಭದ್ರತೆ ಇರಲಿಲ್ಲ. ಅಸೀಮ ರೂಪವತಿ-- ದೇವಾಂಶ ಸಂಭೂತೆ ಮಹಾಶ್ವೇತೆಯಂತೆ. ಅಡಿಗರ ನುಡಿಗಳಲ್ಲಿ,

ಎಲರಿನಲೆಯಲೆಯೊಡನೆ ನಲವೇರಿ ತಲೆಯೊಲೆದು
ಉಲಿವ ಮಧುಪಾವಳಿಯ ಗಾವಳಿಗೆ ಕಿವಿದೆರೆದು
ಹಿರಿದು ಕಿರಿದೆನ್ನದೆಲ್ಲಕು ಸೊದೆಯನೆರೆದೆರೆದು
ಬಳಿಸುಳಿದವರ ನೋಡಿ ನಕ್ಕು ನಲಿಯಿಸಿ ನಲಿದು
ಒಳಗಂಪನೆದೆತಂಪನೆದೆಗೊಳಿಪ ಹೂವವಳು

ಅಂದಿನ ಪೌರಾಣಿಕ ಸಿನೆಮಾಗಳಲ್ಲಿ ಹಾಡಿ ಮತ್ತು ಅಭಿನಯಿಸಿ ಜನಮನಗಳಲ್ಲಿ ಧರೆಗಿಳಿದ ಸಾವಿತ್ರಿಯೇ ಅವರಾಗಿದ್ದರು. ವೇದಿಕೆ ಬೈಠಕ್ಕುಗಳಲ್ಲಿ ರಾರಾಜಿಸಿದ್ದರು. ಈ ಖ್ಯಾತಿಯೇ ತಮ್ಮ ಭವಿಷ್ಯಕ್ಕೆ ಅಪಾಯಕಾರಿಯಾದೀತೆಂಬ ಅಳುಕೂ ಇವರನ್ನು ಆವರಿಸಿತ್ತು. ೧೯೩೬ ರಲ್ಲಿ ಈ ಮುಗ್ಧ ಅಪ್ಸರೆಯ ಸಂಗೀತಪ್ರಪಂಚಕ್ಕೆ ಇವರಿಗಿಂತ ೧೪ ವರ್ಷ ಹಿರಿಯರಾದ ವ್ಯವಹಾರಕುಶಲಿ ಕಲಾಪ್ರಿಯ ಟಿ. ಸದಾಶಿವಂ ಪ್ರವೇಶಿಸಿದರು. ಮುಂದೆ ೧೯೪೦ ರಲ್ಲಿ ಶಾಸ್ತ್ರೋಕ್ತವಾಗಿ ಎಂಎಸ್-ಟಿಎಸ್ ಸತಿಪತಿಗಳಾದರು.

ಸದಾಶಿವಂ ತಮ್ಮ ಗಾನಕೋಗಿಲೆ ಮಡದಿಗೆ ಸುಭದ್ರ ರಕ್ಷಣೆ, ಪಾಲನೆ ಮತ್ತು ಪೋಷಣೆ ಒದಗಿಸಿ ಈಕೆಯ ಸಂಗೀತಸೇವೆ, ಈ ಮೂಲಕ ವಿವಿಧ ಸಾಮಾಜಿಕ ಕಾರ್ಯಗಳಿಗೆ ನಿಧಿಸಂಗ್ರಹ, ಭಾರತದ ಸಾಂಸ್ಕೃತಿಕ ಗಂಧ ಪ್ರಪಂಚದಾದ್ಯಂತ ಪಸರಿಸಲು ಅವಕಾಶ ಮತ್ತು ಎಂಎಸ್ ಎಂದರೆ ಸಂಗೀತಸರಸ್ವತಿ ಹಾಗೂ ದಾನಚಿಂತಾಮಣಿ ಎಂಬುದಾಗಿ ಸರ್ವರೂ ಸದಾಕಾಲ ಸ್ಮರಿಸುವಂತೆ ವೇದಿಕೆ ನಿರ್ಮಿಸಿದರು. ಇಂಥ ನವಯುಗ ಪ್ರವರ್ತಕ ಚೈತನ್ಯದ ಅವಸಾನವನ್ನು ಹೇಗೆ ವರ್ಣಿಸೋಣ? ಈ ಶುಷ್ಕ ಪದಗಳಿಗಿಂತ ಡಿವಿಜಿಯವರಿಗೆ

ಶರಣಾಗುವುದೊಂದೆ ಮಾರ್ಗ:
ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನಸತ್ತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ

***

ದಾಸ್ಯ: ನಿನ್ನೆ, ಇಂದು ಮತ್ತು ನಾಳೆ

- ಅಲೋಕ್ ರೇ.

ಇತ್ತೀಚೆಗೆ ನನಗೆ ಬಹಳ ಆಸಕ್ತಿದಾಯಕ ಕೈ ಬರಹದ ಪತ್ರವೊಂದನ್ನು ನೋಡುವ ಪ್ರಸಂಗ ಒದಗಿತ್ತು. ಆ ಪತ್ರ ಅಮೇರಿಕಾದ ರೊಚೆಸ್ಟರ್ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಪ್ರದರ್ಶನಗೊಂಡಿತ್ತು. ಆ ಪತ್ರ ಅಬ್ರಹಾಂ ಲಿಂಕನ್‌ಗೆ ಸಂಬಂಧಿಸಿದ ಖಾಸಗಿ ಸಂಗ್ರಹಕ್ಕೆ ಸೇರಿದುದಾಗಿತ್ತು. ಆ ಪತ್ರದಲ್ಲಿ ಮಾರ್ಚ್ ೧೪-೧೮೬೨ ಎಂಬ ತಾರೀಕು ನಮೂದಾಗಿತ್ತು. ಆ ಕಾಲದಲ್ಲಿ ಉತ್ತರ ಮತ್ತು ದಕ್ಷಿಣ ಅಮೇರಿಕಾ ಮಧ್ಯೆ ಗುಲಾಮಗಿರಿ ರದ್ಧತಿಯ ವಿಷಯವಾಗಿ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ನಾಗರಿಕ ಯುದ್ಧ ನಡೆಯುತ್ತಿತ್ತು. ಆಗ ಉತ್ತರ ಅಮೇರಿಕಾ ಆರ್ಥಿಕವಾಗಿ ಅಷ್ಟೇನು ಸುಸ್ಥಿತಿಯಲ್ಲಿರಲಿಲ್ಲ. ಮೇಲೆ ಪ್ರಸ್ತಾಪಿಸಲ್ಪಟ್ಟಿರುವ ಪತ್ರದಲ್ಲಿ ಗುಲಾಮರ ಸ್ವಾತಂತ್ರ್ಯದಾತನಾದ ಲಿಂಕನ್ ಎರಡು ಆರ್ಥಿಕ ಸಾಧ್ಯತೆಗಳನ್ನು ಕುರಿತು ತಣ್ಣನೆಯ ರೀತಿಯಲ್ಲಿ ಲೆಕ್ಕ ಹಾಕಿದ್ದಾನೆ.

ಒಂದು, ನಾಗರೀಕಯುದ್ದವನ್ನು ಮುಂದುವರಿಸುವುದೇ; ಅಥವಾ ಆಗಿದ್ದ ಗುಲಾಮರ ಎಲ್ಲ ಮಾಲೀಕರಿಗೆ ಪರಿಹಾರಕೊಟ್ಟು ಎಲ್ಲ ಗುಲಾಮರನ್ನೂ ಖರೀದಿಸುವುದೇ? ಆ ಪತ್ರದಲ್ಲಿ ಲಿಂಕನ್ನನ ಲೆಕ್ಕಾಚಾರ ಈ ರೀತಿ ಇತ್ತು. ಈ ನಾಗರೀಕ ಯುದ್ಧ ೮೭ ದಿನಗಳಿಗಿಂತಲೂ ಕಡಿಮೆ ನಡೆದಲ್ಲಿ ಯುದ್ಧಕ್ಕಾಗಿ ಆಗುವ ಖರ್ಚಿನ ಮಿಕ್ಕ ಹಣದಲ್ಲಿ ಕೊಲಂಬಿಯ, ಕೆಂಟುಕಿ ಮತ್ತು ಮಿಷೊರಿ ಜಿಲ್ಲೆಗಳಲ್ಲಿರುವ ದೆಲ್‌ವಾರೆ, ಮೇರಿಲ್ಯಾಂಡ್‌ಗಳಲ್ಲಿಯ ಎಲ್ಲ ಗುಲಾಮರನ್ನೂ ಪ್ರತಿ ತಲೆಗೆ ೪೦೦ ಡಾಲರ್‌ಗಳಂತೆ ಕೊಟ್ಟು ಖರೀದಿಸಬಹುದು. ಈ ಹಣವನ್ನು ಸಂಬಂಧಿಸಿದ ರಾಜ್ಯಗಳಿಗೆ ಇಪ್ಪತ್ತು ಸಮಕಂತುಗಳಲ್ಲಿ ಅಮೇರಿಕಾ ಕೊಡಬಹುದೆಂದು ಲಿಂಕನ್ ಆ ಪತ್ರದಲ್ಲಿ ಸೂಚಿಸಿದ್ದ.

ಈ ಪತ್ರ ಕೇವಲ ಐತಿಹಾಸಿಕ ಮಹತ್ವದ್ದಷ್ಟೆ ಆಗಿದ್ದಿರದೆ ಇಂದಿನ ವಿಶ್ವಕ್ಕೂ ಈ ಪತ್ರದಲ್ಲಿ ಅನೇಕ ಆಸಕ್ತಿದಾಯಕ ಸೂಚ್ಯಾರ್ಥಗಳಿವೆ. ಮೊದಲನೆಯದು, ಗುಲಾಮಗಿರಿಯ ಸಮಸ್ಯೆಗೆ ಆರ್ಥಿಕ ಪರಿಹಾರವನ್ನು ಸೂಚಿಸುವುದರ ಮೂಲಕ ಈ ಸಮಸ್ಯೆಯ ಹಿಂದಿರುವ ಅಂಶವನ್ನು ಲಿಂಕನ್

ಉಪೇಕ್ಷಿಸುತ್ತಿದ್ದಾನೆಯೇ ಎಂಬುದು. ಒಂದು ವೇಳೆ ಗುಲಾಮಗಿರಿ ತಪ್ಪೆಂದು ಭಾವಿಸುವುದಾದರೆ ಪರಿಹಾರದ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ? ಕೆಲವರು, ಮುಖ್ಯವಾಗಿ ಅರ್ಥಶಾಸ್ತ್ರಜ್ಞರು ಆಲೋಚಿಸುವ ಬಗೆ ಏನೆಂದರೆ, ಅಂತಿಮಗುರಿ ಗುಲಾಮಗಿರಿಯನ್ನು ಮುಕ್ತಾಯಗೊಳಿಸುವುದೇ ಆಗಿದ್ದರೆ ಅದನ್ನು ಅತ್ಯಂತ ಕಡಿಮೆ ಬೆಲೆ ತೆತ್ತು ಸಾಧಿಸುವುದರಲ್ಲಿ ವಿಶೇಷ ಅರ್ಥವಿದೆ. ಹಾಗೆ ಮಾಡುವುದರಿಂದ ಸಾವಿರಾರು ಜನ ತಮ್ಮ ಜೀವನವನ್ನು ಕಳೆದುಕೊಳ್ಳುವುದು ತಪ್ಪುತ್ತದೆ. ಈ ಅರ್ಥದಲ್ಲಿ ಪರಿಹಾರ ಕೊಡುವುದು ನೈತಿಕಮಾರ್ಗವಾಗಿದೆ. ಗುಲಾಮಗಿರಿಯ ಆರ್ಥಿಕತೆ ವಿಷಯವಾಗಿ ಅಧ್ಯಯನ ಮಾಡಿರುವ ಸ್ಟಾನ್ಲಿ ಏಂಜರ್ಮನ್ ಎಂಬ ತಜ್ಞ ಹೇಳಿರುವಂತೆ ಯಾವ ಪರಿಹಾರವನ್ನೂ ಕೊಡದೆ ಗುಲಾಮಗಿರಿಯನ್ನು ಮುಕ್ತಾಯಗೊಳಿಸಿದ ದೇಶ ಅಮೇರಿಕಾ ಒಂದೆ. ಈ ಸಂಬಂಧದಲ್ಲಿ ಸ್ಟಾನ್ಲಿಯು ಇಂಗ್ಲೆಂಡ್, ಫ್ರಾನ್ಸ್, ಡ್ಯಾನಿಶ್ ಮತ್ತು ಸ್ವಿಡನ್ ದೇಶಗಳ ಉದಾಹರಣೆಯನ್ನು ಕೊಡುತ್ತಾನೆ. ಈ ಎಲ್ಲಾ ದೇಶಗಳಲ್ಲಿ ಗುಲಾಮಗಿರಿ ೧೮೬೦ರಲ್ಲಿ ನಾಗರಿಕ ಯುದ್ಧಮುಗಿಯುವ ಮುನ್ನ ನಗದಾಗಿ ಮತ್ತು ಬಾಂಡುಗಳ ರೂಪದಲ್ಲಿ ಗುಲಾಮರ ಮಾಲೀಕರಿಗೆ ಪರಿಹಾರವನ್ನು ಕೊಡಲಾಗಿತ್ತು. ಆದ್ದರಿಂದ ಅಬ್ರಾಹಾಂಲಿಂಕನ್‌ನ ವಿಚಾರ ಹೊಸದೇನೂ ಆಗಿರಲಿಲ್ಲ. ಇಲ್ಲಿ ಆಸಕ್ತಿದಾಯಕ ವಿಷಯವೇನೆಂದರೆ ಈ ಮೊದಲು ಗುಲಾಮರ ಬಿಡುಗಡೆಗಾಗಿ ಹಣವನ್ನು ಕೊಡುವ ವಿಚಾರವನ್ನು ಯಾರೂ ಮಾಡಿರಲಿಲ್ಲವೆಂಬುದು. ಆದರೆ ಗುಲಾಮರಿಗೆ ಅಥವಾ ಅವರ ಉತ್ತರಾಧಿಕಾರಿಗಳಿಗೆ ಪರಿಹಾರಕೊಡುವ ಪ್ರಶ್ನೆಯನ್ನು ಅಮೇರಿಕಾದಲ್ಲಿರುವ ಆಫ್ರಿಕಾ ಮೂಲದ ಅಮೇರಿಕನ್ ಸಂಘಗಳು ಈಗ ಎತ್ತುತ್ತಿವೆ. ಲಿಂಕನ್ನನ ಆ ಪತ್ರ ಇಂದು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಸ್ತುತವಾಗಿದೆಯೆ? ಉದಾಹರಣೆಗೆ ಇತ್ತೀಚಿಗಿನ ಇರಾಕಿನಲ್ಲಿಯ ಅಮೇರಿಕಾದ ಯುದ್ಧದಲ್ಲಿ ಒಂದು ತಂತ್ರವೇನೆಂದರೆ ಬಂಡಾಯಕೋರರಾಗಿದ್ದಂಥ ಧರ್ಮಾಧೀಶರಿಗೆ ವಿಧೇಯರಾಗಿದ್ದ ಯೋಧರಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುವುದೂ ಒಂದು ತಂತ್ರವಾಗಿತ್ತು. ಆದರೆ ಈ ತಂತ್ರವು ಯಾವದೇ ವಿಧದಲ್ಲಿ ಗಂಭೀರವಾದ ಪರಿಣಾಮವನ್ನುಂಟುಮಾಡಲಿಲ್ಲ. ಏಕೆಂದರೆ ಅಮೇರಿಕಾದ ಮೇಲೆ ಮತ್ತು ಇರಾಕಿ ಮಿತ್ರ ರಾಷ್ಟ್ರಗಳ ಮೇಲೆ ಗಂಭೀರವಾದ ದಾಳಿಗಳು ಉಂಟಾಗುವುದು ಮಾತ್ರ ತಪ್ಪಲಿಲ್ಲ. ಬಂಡಾಯಕೋರರನ್ನು ಒದಗಿಸುವುದು ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸುವುದು ಕೊನೆಯಾಗುತ್ತಿದೆಯೆಂದೂ

ಕಾಣುತ್ತಿಲ್ಲ. ಆದರೂ ಕೂಡ ಭಯೋತ್ಪಾದಕರಿಗೆ ಕೆಲಸದ ಆಸೆಯನ್ನೋ ಹಣದ ಆಸೆಯನ್ನೊ, ತೋರಿಸುವುದರ ಮೂಲಕ ಶಸ್ತ್ರಗಳನ್ನೂ ಸೈನಿಕರನ್ನೂ ಖರೀದಿಸುವುದು ಎಲ್ಲ ದೇಶಗಳಲ್ಲೂ ನಡೆಯುತ್ತಲೇ ಇದೆ. ಭಯೋತ್ಪಾದಕತೆಗೆ ತುತ್ತಾಗಿರುವ ಭಾರತವೂ ಇದಕ್ಕೆ ಹೊರತಾಗಿಲ್ಲ. ಲಿಂಕನ್ ನೈತಿಕ ದೃಷ್ಟಿಗಿಂತ ವ್ಯಾವಹಾರಿಕ ದೃಷ್ಟಿಯನ್ನು ಹೊಂದಿದ್ದನೆಂದು ಕೆಲವರು ಅವನನ್ನು ದೂಷಿಸಬಹುದು. ಆದರೆ ಅವನ ಕಾಲದಲ್ಲಿದ್ದ ರಾಜಕೀಯ ವಾಸ್ತವತೆಗಳನ್ನು ಗಮನಿಸಿದಾಗ ಗುಲಾಮಗಿರಿಯನ್ನು ಶುದ್ಧ ನೈತಿಕ ಆಧಾರದ ಮೇಲೆ ಮೂಲೋತ್ಪಾಟನೆ ಮಾಡುವುದು ಅಸಾಧ್ಯವಾಗಿತ್ತೆಂದು ಯಾರಾದರೂ ವಾದ ಮಾಡಬಹುದು. ಆದರೆ ಇದಕ್ಕೆ ಸಮನಾದ ಉದಾಹರಣೆಗಳು ಹಲವಾರು ಇವೆ. ಈ ಸಂದರ್ಭದಲ್ಲಿ ರಾಜಾರಾಮ್‌ಮೋಹನ್‌ರಾಯ್ ಮತ್ತು ಈಶ್ವರಚಂದ್ರ ವಿದ್ಯಾಸಾಗರರವರನ್ನು ಜ್ಞಾಪಿಸಿಕೊಳ್ಳಬಹುದು. ಸತಿಪದ್ಧತಿ ವಿರುದ್ಧಮತ್ತು ವಿಧವಾ ವಿವಾಹ ಪರ ಅವರು ನಡೆಸುತ್ತಿದ್ದ ಹೋರಾಟದ ಸಮರ್ಥನೆಗಾಗಿ ಹಿಂದೂ ಧರ್ಮ ಗ್ರಂಥಗಳಲ್ಲಿಯ ಅನೇಕ ಮಾತುಗಳನ್ನು ಬಳಸಿಕೊಳ್ಳುತ್ತಿದ್ದರು. ಸಾಮಾಜಿಕ ದೋಷಗಳ ವಿರುದ್ಧ ಹೋರಾಟ ನಡೆಸುವಾಗ ನೈತಿಕ ವಾದಗಳ ಜೊತೆಗೆ ಬೇರೆ ಮಾರ್ಗಗಳನ್ನೂ ಉಪಯೋಗಿಸಬೇಕಾಗುತ್ತದೆ.

ವಸ್ತುಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಕೊಡಲಾಗುವ ಪರಿಹಾರದ ಜಾಣ್ಮೆಯ ಬಗ್ಗೆ ಯಾರೂ ಕೂಡ ಪ್ರಶ್ನಿಸಬಹುದು. ಉದಾಹರಣೆಗೆ ಗುಲಾಮಗಿರಿ ಈಗಲೂ ಅಸ್ತಿತ್ವದಲ್ಲಿರುವಂಥ ದೇಶ ಸೂಡಾನ್. ಕೆಲವು ವರ್ಷಗಳ ಹಿಂದೆ ಗುಲಾಮರನ್ನು ಖರೀದಿಸಿ ಅವರನ್ನು ಬಿಡುಗಡೆ ಮಾಡುವ ಪ್ರಯತ್ನ ಅಲ್ಲಿ ನಡೆಯಿತು. ಇದರಲ್ಲಿ ನೈತಿಕ ಅಂಶದ ಹೊರತಾಗಿ ಇನ್ನೊಂದು ವ್ಯವಹಾರಿಕ ಸಮಸ್ಯೆ ಇತ್ತು. ಕೆಲವು ಸೂಡಾನಿ ಜನರು ಗುಲಾಮರನ್ನು ಮಾರಿ ಬಂದ ಹಣದಿಂದಲೆ ಅದೇ ಗುಲಾಮರನ್ನೊ ಅಥವಾ ಬೇರೆಯವರನ್ನೊ ಖರೀದಿಸಿ ಪುನಃ ಅವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವ ಸಾಧ್ಯತೆ ಇತ್ತು. ಆದ್ದರಿಂದ ಗುಲಾಮರನ್ನು ಬಿಡುಗಡೆಮಾಡಲು ಕೊಡುವ ಹಣವು ಗುಲಾಮ ವ್ಯಾಪಾರದ ಮಾರುಕಟ್ಟೆಯನ್ನೇ ಹೆಚ್ಚಿಸಬಹುದು. ಇಂದಿನ ದೊಡ್ಡ ಪ್ರಮಾಣದ ನಿರುದ್ಯೋಗ ಸಮಸ್ಯೆಗೆ ಸಂಬಂಧಿಸಿದ ಹಾಗೆ ಸಮಾನಾಂತರ ಆಸಕ್ತಿದಾಯಕ ಸಂಗತಿ ಇದಾಗಿದೆ. ದಕ್ಷಿಣ ಅಮೇರಿಕಾದವರು ಉತ್ತರ ಅಮೇರಿಕಾದವರಲ್ಲಿ ಹುಟ್ಟಿಸುತ್ತಿದ್ದ

ಭಯವೇನೆಂದರೆ ಸ್ವತಂತ್ರರಾದ ಗುಲಾಮರು ಉತ್ತರ ಅಮೇರಿಕಾಕ್ಕೆ ಹೋಗಿ ಬಿಳಿಯರ ಕೈಯಲ್ಲಿರುವ ಉದ್ಯೋಗಗಳನ್ನು ಕಿತ್ತುಕೊಳ್ಳುತ್ತಾರೆಂಬುದು. ಇಂಥದೆ ವಾದವನ್ನು ಈಗ ಅಮೇರಿಕಾದಲ್ಲಿರುವ ಮುಕ್ತ ಮಾರುಕಟ್ಟೆಯ ವಿರುದ್ಧ ಮಂಡಿಸಲಾಗುತ್ತಿದೆ. ಪ್ರಚಲಿತ ಭಯವೇನೆಂದರೆ ಅಮೇರಿಕಾದಲ್ಲಿರುವ ಮುಕ್ತ ವ್ಯಾಪಾರವು ಅಲ್ಲಿಯ ಉದ್ಯೋಗಗಳನ್ನು ಚೀನಾಕ್ಕೊ, ಭಾರತಕ್ಕೊ ಕೊಂಡೊಯ್ಯಬಹುದು. ಅಲ್ಲದೆ, ಏಷ್ಯಾಖಂಡದಲ್ಲಿರುವ ಅಗ್ಗದ ಕೂಲಿಯಿಂದಾಗಿ ಉಂಟಾಗುವ ಸ್ಪರ್ಧೆ ಅಮೇರಿಕಾದ ಕಾರ್ಮಿಕರ ವೇತನವನ್ನು ಕಡಿಮೆ ಮಾಡುವುದೂ ಎಂಬುದು.

ಇಲ್ಲಿ ಗಮನಿಸಬೇಕಾದ ಮಹತ್ವದ ಸಂಗತಿ ಏನೆಂದರೆ ಅಮೇರಿಕಾ ಮತ್ತು ಇತರ ದೇಶಗಳಲ್ಲಿ ನಡೆದ ಗುಲಾಮರ ಬಿಡುಗಡೆಯ ಚಳುವಳಿಯಲ್ಲಿ ಗುಲಾಮರ ಒಡೆಯರಿಂದ ಭೂಮಿಯನ್ನು ಕಿತ್ತುಕೊಂಡು ಮಾಜಿ ಗುಲಾಮರಿಗೆ ಹಂಚುತ್ತಿರಲಿಲ್ಲ. ಮಾಜಿ ಗುಲಾಮರಿಗೆ ನಲವತ್ತು ಎಕರೆ ಭೂಮಿ ಮತ್ತು ಒಂದು ಹೇಸರಗತ್ತೆಯನ್ನು ಕೊಡುವ ಮಾತನ್ನೇನೊ ಆಡಲಾಗುತ್ತಿತ್ತು. ಆದರೆ ಆ ಮಾತಿನ ಯಾವ ಆಚರಣೆಯೂ ಆಗುತ್ತಿರಲಿಲ್ಲ!.

ಅಂತಿಮವಾಗಿ ಉಳಿಯುವ ಪ್ರಶ್ನೆ ಏನೆಂದರೆ ಒಂದು ಮಹಾನ್ ನೈತಿಕ ಸಮರವನ್ನು ನಡೆಸುತ್ತಿರುವಾಗ ಹೊಂದಾಣಿಕೆ ಮಡಿಕೊಳ್ಳುವುದು ಸರಿಯೆ? ಇಲ್ಲಿ ಈ ಮಾತನ್ನು ಗಮನಿಸಿ: ಗುಲಾಮಗಿರಿಯ ಪ್ರಶ್ನೆಗೆ ಸಂಬಂಧಿಸಿದಂತೆ ಲಿಂಕನ್ನಿನಲ್ಲಿದ್ದ ಪ್ರಾಮಾಣಿಕತೆಯನ್ನಾಗಲೀ, ವೈಚಾರಿಕ ಬದ್ಧತೆಯನ್ನಾಗಲೀ ಯಾರೊಬ್ಬರೂ ಗಂಭೀರವಾಗಿ ಪ್ರಶ್ನಿಸುವುದಿಲ್ಲ. ಆದಾಗ್ಯೂ ಗುಲಾಮಗಿರಿಯನ್ನು ಹೊಂದಿದ್ದ ಕೆಂಟುಕಿಯಂಥ ರಾಜ್ಯವು ಗುಲಾಮಗಿರಿಯನ್ನು ರದ್ದುಪಡಿಸಲು ಹೋರಾಡುತ್ತಿದ್ದಾಗ ಲಿಂಕನ್ ಆ ಬಗ್ಗೆ ಮೃದುಧೋರಣೆಯನ್ನು ಅನುಸರಿಸಿದ್ದು ಏಕೆ? ಏಕೆಂದರೆ ಕೆಂಟುಕಿ ಬಹಳ ದೊಡ್ಡ ಸೈನ್ಯವನ್ನು ಹೊಂದಿತ್ತು. ಲಿಂಕನ್ನನ ಮಾತುಗಳಲ್ಲಿಯೆ ಹೇಳುವುದಾದರೆ "ಯುದ್ಧವನ್ನು ಗೆಲ್ಲಬೇಕಾದರೆ ಅದೃಷ್ಟ ನಮ್ಮೊಂದಿಗಿದ್ದ ಪಕ್ಷದಲ್ಲಿ ಅದೇನೊ ಒಳ್ಳೆಯದೆ. ಆದರೆ ನಿಜವಾಗಿ ಯುದ್ದವನ್ನು ಗೆಲ್ಲಬೇಕಾದರೆ ನಮ್ಮ ಕಡೆಗೆ ಕೆಂಟುಕಿ ಇರಬೇಕಾದದ್ದು ಅಗತ್ಯ!".

ಅನುವಾದ –ಸು.ಕೌ.

– (ಡೆಕ್ಕನ್ ಹೆರಾಲ್ಡ್ ಸಾಭಾರ)

***

ಜನಪದ ನಿಲಯದ ಅಂತರಂಗದಲ್ಲಿ-೧೭

-ಸುರೇಂದ್ರ ಕೌಲಗಿ



೧೯೬೦ ನನ್ನ ಜೀವನದಲ್ಲಿ ಅತ್ಯಂತ ಪ್ರಮುಖವಾದ ಸಂಗತಿಯಾಗಿತ್ತು. ಆಗ ನನಗೆ ೨೯ರ ಯೌವನ. ಜಯಪ್ರಕಾಶ್ ನಾರಾಯಣರ ಸೇವೆಯಿಂದ ಬಿಡುಗಡೆಯಾಗಿ ಕೇವಲ ಒಂದು ವರ್ಷವಾಗಿತ್ತಷ್ಟೆ. ಆದ್ದರಿಂದ ಮನಸ್ಸಿನಲ್ಲಿ ಅನೇಕ ಭಾವನೆಗಳು ಇದ್ದದ್ದು ಸಹಜವಾಗಿತ್ತು. ಸಾಮಾಜಿಕ ಜೀವನದ ಬಗ್ಗೆ ಇದ್ದ ಅನೇಕ ಕನಸುಗಳನ್ನು ನನಸನ್ನಾಗಿ ಮಾಡುವ ಹುಮ್ಮಸ್ಸು ಇತ್ತು. ಆದರೆ ಆ ಭಾವನೆಗಳನ್ನು ಮತ್ತು ಕನಸುಗಳನ್ನು ಸಾಕಾರ ಮಾಡಲು ಅಗತ್ಯವಾಗಿದ್ದ ಮುಖ್ಯ ಸಾಧನಗಳಾದ ಸಂಘಟನೆ ಮತ್ತು ಹಣದ ಬೆಂಬಲ ಇರಲಿಲ್ಲ. ನಾನು ಇಟ್ಟುಕೊಂಡಿದ್ದ ಸರ್ವೋದಯ ವಿಚಾರಾಧಾರಿತ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡಲು ಜನಪದ ಸೇವಾ ಟ್ರಸ್ಟ್ ಎಂಬ ಸಂಸ್ಥೆಯನ್ನೇನೊ ಸ್ಥಾಪಿಸಿದ್ದೆ. ಆದರೆ ಆ ಸಂಸ್ಥೆಯ ಪ್ರಾರಂಭವೂ ಯಾವುದೇ ಸಂಚಿತ ನಿಧಿಯಿಲ್ಲದೆ ಪ್ರಾರಂಭವಾಗಿತ್ತು. ಸಂಸ್ಥೆಯ ಸಂಸ್ಥಾಪಕನಾಗಿದ್ದ ನಾನೂ ಸಹ ಬಹಳ ದೊಡ್ಡ ವ್ಯಕ್ತಿತ್ವವುಳ್ಳ ಮನುಷ್ಯನಾಗಿರಲಿಲ್ಲ. ನಾನೋರ್ವ ಸಾಮಾನ್ಯಕಾರ್ಯಕರ್ತನಾಗಿದ್ದೆ. ನಾನು ಅಂದುಕೊಂಡಿದ್ದ ಕಾರ್ಯವನ್ನು ಸಫಲಗೊಳಿಸಲು ಬೇಕಾದ ನಿಷ್ಠೆ ಮತ್ತು ಅಸಂಗ್ರಹ ವೃತ್ತಿ ಮಾತ್ರ ಪ್ರಬಲವಾಗಿದ್ದವು. ಇವಿಷ್ಟೆ ಪರಿಕರಗಳು ಉದ್ದೇಶದ ಸಾಧನೆಗಾಗಿ ಎಷ್ಟು ನೆರವಾಗಬಲ್ಲವೆಂಬುದು ನನಗೆ ತಿಳಿದಿರಲಿಲ್ಲ. ಆದರೆ ಆತ್ಮವಿಶ್ವಾಸವು ನನ್ನನ್ನು ಕೈಹಿಡಿದು ಮುನ್ನಡೆಸುತ್ತಿತ್ತು. ಈ ಮೊದಲು ನನಗೆ ಯಾವುದೇ ಸಂಸ್ಥೆಯನ್ನು ಕಟ್ಟಿದ ಅನುಭವವಾಗಲಿ ಯಾವುದೇ ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವವಾಗಲಿ ಇರಲಿಲ್ಲ. ಜಯಪ್ರಕಾಶ್ ನಾರಾಯಣ್ ಸ್ವತಃ ರಾಜಕೀಯ ಪಕ್ಷಗಳಂಥ ಸಂಘಟನೆಗಳನ್ನು ತೊರೆದು ಬಂದವರಾಗಿದ್ದರು. ಅವರು ಬಿಹಾರ್‌ನಲ್ಲಿ ಗ್ರಾಮೀಣಾಭಿವೃದ್ದಿ ಕೆಲಸಕ್ಕಾಗಿ ಗ್ರಾಮ ನಿರ್ಮಾಣ ಮಂಡಲವೆಂಬ ಸಂಸ್ಥೆಯನ್ನೆನೊ ಸ್ಥಾಪಿಸಿದ್ದರು ಅದರ ಸಂಸ್ಥಾಪಕ

ಅಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದರು. ಆದರೆ ಅವರ ಸ್ವಭಾವ, ವಿಚಾರ ಮತ್ತು ವ್ಯಕ್ತಿತ್ವ ಯಾವುದೇ ಒಂದು ಸಂಸ್ಥೆಯ ಚೌಕಟ್ಟಿನೊಳಗೆ ಒಳಪಡುವುದಕ್ಕಿಂತ ದೊಡ್ಡದಾಗಿದ್ದುದ್ದರಿಂದ ಅವರು ವ್ಯವಹಾರ ದೃಷ್ಟಿಯಿಂದ ಸಂಸ್ಥೆಯನ್ನು ನಡೆಸುವಲ್ಲಿ ಅಷ್ಟೇನೂ ಯಶಸ್ಸನ್ನು ಕಾಣಲಿಲ್ಲ. ನಾನು ಜಯಪ್ರಕಾಶರ ಗ್ರಾಮ ನಿರ್ಮಾಣ ಮಂಡಲದ ಸೋಖೋದೇವರ ಬಳಿಯ ಸರ್ವೋದಯ ಆಶ್ರಮದಲ್ಲಿ ಇದ್ದೆನಾದರೂ ಒಂದು ಸಂಸ್ಥೆಯ ನಿರ್ವಹಣೆಯ ಅನುಭವವನ್ನು ಪಡೆಯಲು ಸಾಧ್ಯವಾಗಿರಲಿಲ್ಲ. ಆದರೆ ಆಗಾಗ್ಗೆ ಆಶ್ರಮದಲ್ಲಿ ಜಯಪ್ರಕಾಶರ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಗ್ರಾಮ ನಿರ್ಮಾಣ ಮಂಡಲದ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿದ್ದ ಮತ್ತು ಸಭೆಯ ನಂತರದ ಪರಿಣಾಮದ ವಿಷಯಗಳನ್ನು ಕೇಳುತ್ತಿದ್ದ ನನಗೆ ಸಂಸ್ಥೆಯ ನಿರ್ವಹಣೆಯಲ್ಲಿಯ ತೊಡಕುಗಳು ಸ್ಥೂಲವಾಗಿ ಗೊತ್ತಾಗುತ್ತಿತ್ತು. ಸರ್ವೋದಯ ಆಂದೋಲನದ ಇನ್ನೋರ್ವ ನಾಯಕರಾಗಿದ್ದ ಆಚಾರ್ಯ ವಿನೋಬಾ ಭಾವೆಯವರಂತೂ ಸಾರ್ವಜನಿಕ ಕಾರ್ಯಕರ್ತರು, ಅದರಲ್ಲೂ ಮುಖ್ಯವಾಗಿ ಸರ್ವೋದಯ ಕಾರ್ಯಕರ್ತರು ಸಂಪೂರ್ಣವಾಗಿ ನಿಧಿಮುಕ್ತರು ಮತ್ತು ತಂತ್ರಮುಕ್ತರು ಆಗಿರಬೇಕೆಂಬ ಮಾತು ನನಗೆ ಆಗಾಗ್ಗೆ ಕೇಳಿ ಬರುತ್ತಿದ್ದುದಲ್ಲದೆ ವಿನೋಬಾರ ಸಾಹಿತ್ಯವನ್ನು ನಾನು ಓದುವಾಗಲೆಲ್ಲ ವಿನೋಬಾರ ಈ ವಿಚಾರಗಳು ಗೋಚರಿಸುತ್ತಿದ್ದವು. ಹೀಗಾಗಿ ಸರ್ವೋದಯದ ಈ ನಾಯಕರೀರ್ವರಿಂದ ಸಂಸ್ಥೆಯನ್ನು ಕಟ್ಟುವ ಬಗೆ, ನಿರ್ವಹಿಸುವ ರೀತಿ ಇತ್ಯಾದಿಗಳ ಬಗ್ಗೆ ನನಗೆ ಯಾವ ಮಾರ್ಗದರ್ಶನವು ಸಿಗುವಂತಿರಲಿಲ್ಲ. ಆದ್ದರಿಂದ ಹೆಜ್ಜೆ ಇಟ್ಟಿದ್ದೆ ದಾರಿಯಾಗಿತ್ತು, ಯೋಚಿಸಿದ್ದೆ ಕಾರ್ಯಕ್ರಮವಾಗಿತ್ತು, ತ್ಯಾಗವೆ ನಿಧಿಯಾಗಿತ್ತು. ಈ ರೀತಿ ಅನನುಭವಿಯಾಗಿ ಜನಪದ ಸೇವಾ ಟ್ರಸ್ಟನ್ನು ಸ್ಥಾಪಿಸಿದಾಗ ನನಗೆ ಮುಖ್ಯವಾಗಿ ನೆರವಿಗೆ ಬಂದದ್ದು ಮೈಸೂರಿನ ಗಾಂಧಿ ಗ್ರಂಥಮಾಲೆಯ ಸಂಪಾದಕ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಿ.ಆರ್.ಪ್ರಾಣೇಶ್‌ರಾವ್‌ರವರು. ಅವರು ಕಸ್ತೂರ ಬಾ ಟ್ರಸ್ಟಿನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಕರ್ನಾಟಕ ಗಾಂಧಿ ಸ್ಮಾರಕನಿಧಿಯ ಕಾರ್ಯದರ್ಶಿಯಾಗಿಯೂ ಸಹ

ಕಾರ್ಯನಿರ್ವಹಿಸಿದ್ದರು. ಮೈಸೂರಿನ ಶಾರದ ವಿಲಾಸ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸಮಾಡುತ್ತಿದ್ದರು. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಬಹಳಷ್ಟು ಅನುಭವ ಪಡೆದಿದ್ದರು. ಅವರು ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದುದರಿಂದ ವಿನೋಬಾರ ಭೂದಾನ–ಗ್ರಾಮದಾನ ಆಂದೋಲನಗಳ ಹಿಂದಿರುವ ಆರ್ಥಿಕ ಪರಿಣಾಮಗಳನ್ನು ಅಭ್ಯಸಿಸುವ ಬಗ್ಗೆ ಆಸಕ್ತಿ ಉಳ್ಳವರಾಗಿದ್ದರು. ಆಗ ಬಿಹಾರ ರಾಜ್ಯದಲ್ಲಿ ಗ್ರಾಮದಾನ ಆಂದೋಲನ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಗ್ರಾಮದಾನಿ ಹಳ್ಳಿಗಳ ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ ಡಾಕ್ಟರೇಟ್ ಪಡೆಯಬೇಕೆಂಬುದು ಅವರ ಇಚ್ಛೆಯಾಗಿತ್ತು. ಅದಕ್ಕಾಗಿ ಅವರು, ನಾನು ಬಿಹಾರದಲ್ಲಿ ಇದ್ದಾಗ ಬಂದದ್ದು ಉಂಟು. ನಾನು ಮತ್ತು ಪ್ರಾಣೇಶ್‌ರಾವ್ ಉತ್ತರ ಪ್ರದೇಶ ಮತ್ತು ಬಿಹಾರದ ಕೆಲವು ಗ್ರಾಮದಾನಿ ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದೂ ಉಂಟು. ಮುಂದೆ ಜಯಪ್ರಕಾಶರು ತಮ್ಮ ಪ್ರವಾಸ ಕಾಲದಲ್ಲಿ ಮುಂಬೈಯ ಮಣಿಭವನದಲ್ಲಿ ತಂಗಿದ್ದಾಗ ಪ್ರಾಣೇಶ್‌ರಾವ್ ಜಯಪ್ರಕಾಶರನ್ನು ಭೇಟಿ ಮಾಡಲು ಅಲ್ಲಿಗೆ ಬಂದರು ಆಗ ನಾನು ಪ್ರಾಣೇಶ್‌ರಾವ್ ಅವರನ್ನು ಜಯಪ್ರಕಾಶರಿಗೆ ಪರಿಚಯಿಸಿ ಪ್ರಾಣೇಶ್‌ರಾಯರ ಅಧ್ಯಯನದ ಆಸಕ್ತಿಯ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದೆ. ಈ ಎಲ್ಲಾ ಕಾರಣಗಳಿಂದಾಗಿ ನನಗಿಂತಲೂ ಹಿರಿಯರೂ, ಅನುಭವಿಗಳೂ, ವಿಚಾರಶೀಲರೂ, ಸರ್ವೋದಯ ವಿಚಾರದಲ್ಲಿ ತೀವ್ರ ಆಸಕ್ತಿ ಉಳ್ಳವರಾದ ಪ್ರಾಣೇಶರಾಯರ ಮಾರ್ಗದರ್ಶನವನ್ನು ಪಡೆಯುವಂಥಾ ಅವಕಾಶ ದೊರೆತದ್ದು ಜನಪದ ಸೇವಾ ಟ್ರಸ್ಟ್‌ನ ಪ್ರಾರಂಭದ ದಿನಗಳಲ್ಲಿ ಬಹು ಮುಖ್ಯವಾದ ಸಂಗತಿಯಾಗಿತ್ತು. ಮುಂದೆ ನಾನು ಪ್ರಾಣೇಶರಾಯರನ್ನು ಸಾರ್ವಜನಿಕ ಕ್ಷೇತ್ರದ ನನ್ನ ಅಣ್ಣನೆಂದೆ ಕೊನೆಯವರೆಗೂ ಭಾವಿಸಿದ್ದೆ.

–ಮುಂದುವರೆಯುವುದು

***

ಸಂತಾಪ

* ಇಂಗ್ಲೀಷಿನ ಶ್ರೇಷ್ಠ ಪ್ರಾಧ್ಯಾಪಕರೂ, ವಿದ್ಯಾರ್ಥಿಗಳ ಕಣ್ಮಣಿಯೂ ಆಗಿದ್ದ ಪ್ರೊ॥ ಸಿ.ಡಿ.ನರಸಿಂಹಯ್ಯನವರು.

ಮತ್ತು

* ಸಂಸ್ಕೃತ ವಿದ್ವಾಂಸರು, ಸಾತ್ವಿಕರು, ಸಜ್ಜನರು ಹಾಗೂ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಅಣ್ಣಂದಿರು ಆಗಿದ್ದ ಶ್ರೀ ಗೊರೂರು ನರಸಿಂಹಾಚಾರ್ಯರು

ಮತ್ತು

* ಕನ್ನಡದ ನವ್ಯಕವಿ ಬಿ.ಸಿ. ರಾಮಚಂದ್ರಶರ್ಮ

ಮತ್ತು

* ಆಗಮಶಾಸ್ತ್ರ ವಿದ್ವಾಂಸರು, ಬಹುಭಾಷಾ ಕೋವಿದರೂ, ಕನ್ನಡ ಸಾಹಿತ್ಯ ರಚನಾಕಾರರೂ ಆಗಿದ್ದ ಮೇಲುಕೋಟೆ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್

ಮತ್ತು

* ಜನಪದ ಸೇವಾ ಟ್ರಸ್ಟಿನ ಧರ್ಮದರ್ಶಿಯವರೂ ಮತ್ತು ಹಿರಿಯ ಸಾರ್ವಜನಿಕ ನಾಯಕರೂ ಆಗಿದ್ದ ಶ್ರೀ ಎಚ್. ಡಿ. ತುಳಸಿದಾಸ್ ದಾಸಪ್ಪ

ಮತ್ತು

* ಉತ್ತರ ಕರ್ನಾಟಕದ ಪ್ರಸಿದ್ಧ ಸಾಹಿತಿಗಳಲ್ಲಿ ಒಬ್ಬರಾಗಿದ್ದ "ನಾನಿ ಕಾಕ" ಎಂದು ಪ್ರಸಿದ್ಧರಾಗಿದ್ದ ಎನ್ಕೆ. ಕುಲಕರ್ಣಿಯವರು

ಈ ಆರು ಜನ ಹಿರಿಯರ ನಿಧನಕ್ಕಾಗಿ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(-ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com